
# ಎಚ್.ವಿ. ವೆಂಕಟಸುಬ್ಬಯ್ಯ

ಎಚ್. ಕೆ. ರಾಮಮೂರ್ತಿ



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು ಮಾಲಿಕೆ

# ಎಚ್.ವಿ. ವೆಂಕಟಸುಬ್ಬಯ್ಯ

ಎಚ್. ಕೆ. ರಾಮಮೂರ್ತಿ

ಕರ್ನಾಟಕ ನಾಟಕ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ,

ಬೆಂಗಳೂರು - ೦೨

H.V.Venkatasubbaiah

A Monograph in Kannada by H.K.Ramamurthy Published by Mr. Siddaraju, Registrar, Karnataka Nataka Academy, Kannada Bhavana, J.C.Road, Bengaluru-560002 . Phone: 08022237484

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | ೨೦೧೬ |
| ಪ್ರತಿಗಳು | : | ೧,೦೦೦ |
| ಪುಟಗಳು | : | viii + ೪೪ = ೫೨ |
| ಬೆಲೆ | : | ರೂ. ೬೦/- |

**ಪ್ರಕಾಶಕರು**

ಸಿದ್ಧರಾಜು, ರಿಜಿಸ್ಟ್ರಾರ್,

ಕರ್ನಾಟಕ ನಾಟಕ ಅಕಾಡೆಮಿ,

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨

ದೂರವಾಣಿ: ೦೮೦ ೨೨೨೩೭೪೮೪

ಮುಖಪುಟ ವಿನ್ಯಾಸ :

ಕೃಷ್ಣ ರಾಯಚೂರು

ಮುದ್ರಣ : ಕ್ಯಾಬ್ ಟೆಕ್ ಪ್ರಿಂಟರ್ಸ

ಬೆಂಗಳೂರು - ೫೬೦ ೦೪೦

ಮೊ : ೯೭೩೯೦೬೭೩೫೯

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೪ ರಿಂದ ೩೦ರ ವರೆಗೆ ನಡೆದ ರಾಜ್ಯ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೧೦ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು, ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟಣೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟಣಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

**ಎಲ್.ಬಿ.ಶೇಖ (ಮಾಸ್ತರ)**

ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ

ಕರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5-6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟಣಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ದಾಖಲೆ ವೀರ ಸುಬ್ಬಣ್ಣ**

ಸುಬ್ಬಣ್ಣ ಎಂದೇ ಹವ್ಯಾಸಿ ರಂಗ ವಲಯದಲ್ಲಿ ಆತ್ಮೀಯವಾಗಿ ಕರೆಸಿಕೊಳ್ಳುವ ಎಚ್.ವಿ. ವೆಂಕಟಸುಬ್ಬಯ್ಯ ಅವರು ನಟ, ನಿರ್ದೇಶಕ, ಸಂಘಟಕ ಹಾಗೂ ನೇಪಥ್ಯ ಕಲಾವಿದರು. ಇವೆಲ್ಲ ಅವರ ಬಹುಮುಖ ಪ್ರತಿಭೆಯ ಒಂದು ಮುಖವಾದರೆ, ಅಮೂಲ್ಯವಾದ ದಾಖಲೀಕರಣ ಅವರ ಕ್ರಿಯಾಶೀಲತೆಯ ಮತ್ತೊಂದು ಮುಖ.

ಕನ್ನಡ ರಂಗಭೂಮಿಯ ದಾಖಲೀಕರಣ ಇಲ್ಲವೇ ಇಲ್ಲ ಎಂದರೂ ತಪ್ಪಾಗುವುದಿಲ್ಲ. ಸುಬ್ಬಣ್ಣನವರು ಕೈಗೊಂಡಿರುವ ದಾಖಲೀಕರಣದ ಕೆಲಸ ಇಂತಹ ಸಂದರ್ಭದಲ್ಲಿ ಮಹತ್ವ ಪಡೆಯುತ್ತದೆ.

ಇಂತಹ ರಂಗಚೇತನದೊಂದಿಗೆ ಒಡನಾಡಿರುವ ಎಚ್.ಕೆ.ರಾಮಮೂರ್ತಿ ಅವರು ಸುಬ್ಬಣ್ಣನವರ ಸೃಜನಶೀಲತೆ ವಿಕಸನಗೊಂಡಿರುವ ಬಗೆಯನ್ನು ಬಾಲ್ಯದ ಚಿಕ್ಕಪುಟ್ಟ ವಿವರಗಳ ಮೂಲಕ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಕಿರಿದರಲ್ಲೇ ಹಿರಿದಾದ ಅರ್ಥ ಹೊರಡಿಸಿರುವುದು ಇಲ್ಲಿನ ಬರಹದ ವೈಶಿಷ್ಟ್ಯ. ಸುಬ್ಬಣ್ಣನವರ ಅಗಾಧವಾದ ರಂಗಸಾಧನೆಯನ್ನು ಸಂಕ್ಷಿಪ್ತವಾಗಿ ಕಟ್ಟಿಕೊಟ್ಟಿರುವ ಅಪರೂಪದ ಚಿತ್ರಣ ಇದು.

ಗುಡಿಹಳ್ಳಿ ನಾಗರಾಜ

ಪ್ರಕಟಣಾ ಸಮಿತಿ
ಕೆ. ಜಗುಚಂದ್ರ
ಉಮೇಶ್ ಸಾಲಿಯಾನ್
ಹಾಲ್ಕುರಿಕೆ ಶಿವಶಂಕರ್

**ಕರ್ನಾಟಕ ನಾಟಕ ಅಕಾಡೆಮಿ**

**ಎಲ್.ಬಿ.ಶೇಖ (ಮಾಸ್ತರ)**

ಅಧ್ಯಕ್ಷರು

ಸದಸ್ಯರು

ರಾಜಪ್ಪ ಕಿರಗಸೂರು

ಕಲ್ಪನಾ ನಾಗನಾಥ್

ಪಿ.ತಿಪ್ಪೇಸ್ವಾಮಿ

ಎಂ.ಎಸ್.ಗುಣಶೀಲನ್

ಮುದ್ದಣ್ಣ ರಟ್ಟೆಹಳ್ಳಿ

ಅನ್ನಪೂರ್ಣ ಸಾಗರ

ಗುಡಿಹಳ್ಳಿ ನಾಗರಾಜ

ಎಚ್.ಷಡಾಕ್ಷರಪ್ಪ ಹೊಸಮನಿ

ಶ್ರೀಪಾದ ಭಟ್

ಉಮೇಶ ಸಾಲಿಯಾನ್

ವಿ.ಎನ್.ಅಕ್ಕಿ

ಬಿ.ಎಂ.ರಾಮಚಂದ್ರ

ಎನ್.ಕೆ.ರಾಮಕೃಷ್ಣ

ಎ.ವರಲಕ್ಷ್ಮಿ

ಎಸ್.ಕೆ.ಕೊನೆಸಾಗರ

ಹಾಲ್ಕುರಿಕೆ ಶಿವಶಂಕರ್

ಎಲ್.ಎಚ್.ರಂಗನಾಥಪ್ಪ

ಕೆ.ಜಗುಚಂದ್ರ

ರಿಜಿಸ್ಟ್ರಾರ್;

**ಸಿದ್ದರಾಜು**

ಯೋಜನಾ ಸಹಾಯಕರು:

**ಕೆ.ರೇವಣ್ಣ**

ಕಚೇರಿ ಸಿಬ್ಬಂದಿ:

**ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ**

# ಲೇಖಕನ ಎರಡು ಮಾತು

ರಂಗಸಂಪನ್ನರ ಬಗ್ಗೆ ಕರ್ನಾಟಕ ನಾಟಕ ಅಕಾಡೆಮಿ ಜೀವನ ಚರಿತ್ರೆಗಳನ್ನು ಕಾಲ ಕಾಲಕ್ಕೆ ಹೊರತರುತ್ತಿರುವುದು ಸ್ತುತ್ಯಾರ್ಹ. ಅಂತೆಯೇ ನನಗೆ ಸುಬ್ಬಣ್ಣನವರನ್ನು (ಹೆಚ್.ವಿ.ವೆಂಕಟಸುಬ್ಬಯ್ಯ) ಕುರಿತು ಬರೆಯಲು ಕೇಳಿದಾಗ ಮಾನಸಿಕವಾಗಿ ಹರ್ಷಗೊಂಡರೂ, ವಹಿಸಿದ ಕಾರ್ಯವನ್ನು ತೃಪ್ತಿಕರವಾಗಿ ನಿರ್ವಹಿಸುವ ಬಗ್ಗೆ ನನಗೆ ಅನುಮಾನ ಕಾಡಲು ಪ್ರಾರಂಭವಾಯಿತು. ಎಂದಿಗೂ ಜೀವನ ಚರಿತ್ರೆ ಬರೆಯುವುದು ಕಠಿಣ ಕಾರ್ಯ. ಸತ್ಯಕ್ಕೆ ದೂರವಾಗುವಂತಿಲ್ಲ. ಅಂತೆಯೇ ಸಾಧಕರ ಮಾನಸಿಕ ಸೂಕ್ಷ್ಮತೆಯನ್ನು ಗಮನದಲ್ಲಿ ಇಟ್ಟುಕೊಂಡಿರಬೇಕಾಗಿರುವುದೂ ಸಹ ಅನಿವಾರ್ಯ. ಈ ಎರಡು ಗಡಿಗಳ ನಿರ್ವಹಣೆಗೋಸ್ಕರ, ಸುಬ್ಬಣ್ಣ ನನ್ನ ಐದುವರೆ ದಶಕಗಳ ಸ್ನೇಹಿತರಾದರೂ ಸಾಂಪ್ರದಾಯಿಕ ರೀತ್ಯಾ ಸಂದರ್ಶಿಸಲು ಕೇಳಿಕೊಂಡೆ.

ಮೂರು ನಾಲ್ಕು ದಿನ ನಡೆದ ಸಂದರ್ಶನದಲ್ಲಿ ಪ್ರಪ್ರಥಮವಾಗಿ ಸುಬ್ಬಣ್ಣನವರು ಈ ಕಾರ್ಯಕ್ಕೆ ತಾವೇ ಅಕಾಡೆಮಿಗೆ ನನ್ನ ಹೆಸರನ್ನು ಸೂಚಿಸಿದ್ದಾಗಿಯೂ ಅದರಲ್ಲೂ ನಾನು ಸ್ವಪ್ರತಿಷ್ಠೆಗಿಂತಲೂ ವಾಸ್ತವಾಂಶಕ್ಕೆ ಹೆಚ್ಚು ಗಮನ ಕೊಡುವುದರಿಂದಲೇ ಈ ರೀತಿಯ ನಿರ್ಣಯವನ್ನು ತೆಗೆದುಕೊಂಡೆನೆಂತಲೂ ಹೇಳಿದಾಗ ನನ್ನ ಮನಸ್ಸಿನಲ್ಲಿದ್ದ ದ್ವಂದ್ವ ಬಗೆಹರಿದು ವಹಿಸಿದ ಕೆಲಸವನ್ನು ನಿರ್ವಹಿಸಲು ಯಾವುದೇ ಹಿಂಜರಿಕೆಯೂ ಇಲ್ಲದಂತಾಯಿತು.

ಯಾವುದೇ ರಾಷ್ಟ್ರ, ರಾಜ್ಯ ಅಥವಾ ಪ್ರದೇಶದ ನಾಗರೀಕತೆಯ ಗುಣಮಾಪಕ ಅಲ್ಲಿನ ಜೀವಂತ ಸಾರ್ವಜನಿಕ ಪ್ರದರ್ಶನ ಕಲೆ (Live performing Arts). ಪ್ರಾಚೀನ ಕಾಲದಿಂದ ಇಂದಿನವರೆಗೂ ರಂಗಸಾಧಕರು ಅಪಾರ ಸಂಖ್ಯೆಯಲ್ಲಿ ಇದ್ದರು ಹಾಗೂ ಇದ್ದಾರೆ. ಸುಬ್ಬಣ್ಣನವರು ಒಬ್ಬ ಶ್ರೇಷ್ಠ ರಂಗಸಾಧಕರು ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಅವರನ್ನು ಒಂದು ಪ್ರತ್ಯೇಕ ಶ್ರೇಣಿಗೆ ತಲುಪಿಸುವುದು ಅವರ ಅನ್ವೇಷಣೆ, ತೃಪ್ತಿ ಹೊಂದದ ಮನೋಭಾವ, ಪರಿಪೂರ್ಣತೆಗೆ ಹಂಬಲ-ಎಲ್ಲಕ್ಕೂ ಮಿಗಿಲಾಗಿ ಸಮಕಾಲೀನ ಕನ್ನಡ ರಂಗಭೂಮಿಯ ಇಡೀ ಆಗು ಹೋಗುಗಳ, ಸಾಧನೆಗಳ ಹಾಗೂ ಮೈಲುಗಲ್ಲುಗಳ ಕೇಂದ್ರೀಕೃತ ದಾಖಲೆ ನೆಲೆಗೊಳಿಸುವ ಹೊಂಗನಸು. ಈ ದಾಖಲೆಯ ಕನಸನ್ನು ಅವರು ಹತ್ತಾರು ವರ್ಷಗಳಿಂದಲೂ ಹೊತ್ತಿದ್ದು ಸತತ ಪ್ರಯತ್ನದಿಂದ ಇಡೀ ಕನ್ನಡ ರಂಗಭೂಮಿಯ ಚಟುವಟಿಕೆಗಳನ್ನೆಲ್ಲಾ, ಸಣ್ಣದು ದೊಡ್ಡದು ಎಂಬ ಭೇದ ಭಾವವಿಲ್ಲದೆ ಮತ್ತು ತಂಡಗಳ ಭೇದ ಭಾವಗಳಿಲ್ಲದೆ ಕ್ರೋಢೀಕರಿಸಿ ಸಂಗ್ರಹಿಸಿದ್ದಾರೆ ಹಾಗೂ ಇನ್ನೂ ಸಂಗ್ರಹಿಸುತ್ತಿದ್ದಾರೆ. ಈ ಸಂಗ್ರಹಗಳ ಅಪಾರ ಸಂಪತ್ತು ಸರ್ವರಿಗೂ ಲಭ್ಯವಾಗುವಂತೆ ಛಾಪಿತ ದಾಖಲು ಅಥವಾ ವಿದ್ಯುನ್ಮಾನ ದಾಖಲೆ (e-Document) ಆಗುವ ಅವರ ಕನಸು ನನಸಾಗಲೆಂದು ಅನುಗ್ರಹಿಸುವಂತೆ ಸರ್ವಶಕ್ತ ಭಗವಂತನಲ್ಲಿ ನನ್ನ ಪ್ರಾರ್ಥನೆ.

ಸುಬ್ಬಣನವರ ಸಾಧನೆಯನ್ನು ಈ ಹೊತ್ತಿಗೆ ಎತ್ತಿ ತೋರಿಸಿದರೆ ಅದು ಸುಬ್ಬಣ್ಣನವರ ಹಿರಿಮೆ. ಹೊತ್ತಿಗೆ ಯಶಸ್ವಿಯಾಗದಿದ್ದರೆ ಅದು ನನ್ನ ಲೇಖನಿಯ ಕೊರತೆ.

**- ಎಚ್. ಕೆ. ರಾಮಮೂರ್ತಿ**

# ಎರಡು ಪ್ರಸಂಗಗಳು

ಸುಮಾರು ೧೯೭೪ರಲ್ಲಿ ಒಂದು ಮಧ್ಯಾಹ್ನ ಪ್ರೊ.ಬಿ.ಸಿ. ತಮ್ಮ ಕಛೇರಿಯಲ್ಲಿ ಕಾರ್ಯಮಗ್ನರಾಗಿದ್ದರು. ಆಗ ಅವರು ಬೆಂಗಳೂರು ವಿಶ್ವವಿದ್ಯಾನಿಲಯದ ನಾಟಕ ವಿಭಾಗದ ಮುಖ್ಯಸ್ಥರು. ಕಛೇರಿಯ ಗುಮಾಸ್ತ ಅವರಿಗೆ ಒಂದು ಚೀಟಿಯನ್ನು ತಲುಪಿಸಿದ. “ಅವರನ್ನ ಒಳಕ್ಕೆ ಕಳಿಸಪ್ಪಾ' ಎಂದು ಹೇಳಿ, ಬಿ.ಸಿ. ಗಮನಿಸುತ್ತಿದ್ದ ಕಾಗದ ಪತ್ರಗಳನ್ನು ಪಕ್ಕಕ್ಕೆ ಸರಿಸಿ ಆರಾಮದ ಧಾಟಿಯಲ್ಲಿ ಕುಳಿತುಕೊಂಡರು. ವ್ಯಕ್ತಿ ಒಳಗೆ ಬಂದು,

“ನಮಸ್ಕಾರ ಸಾರ್, ಚೆನ್ನಾಗಿದೀರ”

“ಓ ಏನಪ್ಪಾ ಇಷ್ಟು ದೂರ, ನೀವು ಚೆನ್ನಾಗಿದೀರ”

“ನಿಮ್ಮನ್ನೇ ನೋಡೋಣ ಅಂತ ಬಂದೆ ಸಾರ್.”

“ಹೇಳೀಪ್ಪ, ಸಂಕೋಚ ಯಾಕೆ, ನನ್ನ ಹತ್ತಿರ. ಅದೇನು ವಿಷಯ ಹೇಳಿ"

“ಸಾರ್, ನಿಮಗೆ ಗೊತ್ತಿರೋ ಹಾಗೆ ನಾವುಗಳು ಸುಮಾರು ವರ್ಷಗಳಿಂದ ನಾಟಕಗಳನ್ನು ಮಾಡುತ್ತಿದ್ದರೂ ನಮಗೆ ಬೇಸಿಕ್ ಕ್ವಾಲಿಫಿಕೇಷನ್ ಇಲ್ಲದೆ ಇರೋದು ಒಂದು ತರಹ ಹ್ಯಾಂಡಿಕ್ಯಾಪ್ ಅನ್ನಿಸಿಬಿಟ್ಟಿದೆ.”

“ಸರಿಯಪ್ಪಾ, ಆದರೆ ಅದಕ್ಕೆ ಈಗ ಏನು ಮಾಡೋಕಾಗುತ್ತೆ?”

“ನೀವು ಒಪ್ಪಿದರೆ ಬಿ.ಎ. ಕ್ಲಾಸ್ಗೆ ಸೇರಿಕೊಳ್ಳೋಣ ಅಂತ ಅಂದುಕೊಂಡಿದೀನಿ”

“ಧಾರಾಳವಾಗಿ ಸೇರಿಕೊಳ್ಳಿ. ಅದಕ್ಕೇನು, ಎಲಿಜಿಬಿಲಿಟಿ ಹ್ಯಾಗಿದ್ದರೂ ಇದ್ದೇ ಇದೆ.”

“ಆದರೆ ಒಂದು ಸಣ್ಣ ಪ್ರಾಬ್ಲಮ್ಮು ಸಾರ್”

“ಏಪ್ಪಾ ಅದು”

“ನಾನು ಕೆಲಸದಲ್ಲಿ ಇರೋದರಿಂದ ಕ್ಲಾಸೆಸ್ ಅಟೆಂಡ್ ಮಾಡೋದು ಕಷ್ಟ, ನೀವು ಅಟೆಂಡೆನ್ಸ್ ಕೊಟ್ಟರೆ ನಾನು ಪ್ರೈವೇಟ್ ಆಗಿ ನಿಮ್ಮ ಟೆಕ್ಸ್ಟ್ ಬುಕ್ಸ್ನ ಓದ್ಕೊಂಡು ಪರೀಕ್ಷೆ ತೊಗೋಬಹುದು.”

“ಅದು ಹ್ಯಾಗಪ್ಪ ಆಗುತ್ತೆ, ಒಂದೇ ಕಾಲದಲ್ಲಿ ಎರಡೆರಡು ಕಡೆ ಕೆಲಸಾ ಮಾಡೋದು ಸಾಧ್ಯ ಆಗುತ್ತಾ. ಇದು practically impossible.”

“ಸಾರೀ, ಸಾರ್, ನಿಮಗೆ embarrass ಮಾಡೋಕೆ ನಾನು ಇದನ್ನ ಕೇಳಲಿಲ್ಲ. ರೂಲ್ಸ್‌ಗೆ ವ್ಯತಿರಿಕ್ತವಾಗಿ ಯಾವುದನ್ನೂ ಮಾಡೋದು ಬೇಡ. ಮುಂದಕ್ಕೆ ಯಾವಾಗಲಾದರೂ ನೋಡಿಕೊಳ್ಳೋಣ. ಸರಿ ಸಾರ್, ನಾನು ಬರ್ತೀನಿ ಸಾರ್. ತೊಂದರೆ ಕೊಟ್ಟೆ.”

"ಸರಿಯಪ್ಪ. ಹೋಗಿದ್ದು ಬನ್ನಿ."

ಸುಮಾರು ೧೯೭೬. ಒಂದು ಮಧ್ಯಾಹ್ನ ಡಾ.ಎಚ್.ಕೆ.ರಂಗನಾಥ್ ಅದೇ ಕಛೇರಿಯಲ್ಲಿ ಕಾರ್ಯಮಗ್ನರಾಗಿದ್ದರು. ಬೆಂಗಳೂರು ವಿಶ್ವವಿದ್ಯಾನಿಲಯದ ನಾಟಕ ವಿಭಾಗದ ಮುಖ್ಯಸ್ಥರ ಬದಲಾವಣೆ ಆಗಿತ್ತು. ಅದೇ ಗುಮಾಸ್ತ ಅವರಿಗೆ ಯಥಾ ಪ್ರಕಾರ ಒಂದು ಚೀಟಿಯನ್ನು ತಲುಪಿಸಿದ. ಕಳಿಸಪ್ಪಾ ಅವರನ್ನ ಒಳಕ್ಕೆ ಎಂದು ಹೇಳಿ ಗಮನಿಸುತ್ತಿದ್ದ ಕಾಗದ ಪತ್ರಗಳನ್ನು ಪಕ್ಕಕ್ಕೆ ಸರಿಸಿ ಆರಾಮದ ಧಾಟಿಯಲ್ಲಿ ಕುಳಿತುಕೊಂಡರು. ವ್ಯಕ್ತಿ ಒಳಗೆ ಬಂದು

"ನಮಸ್ಕಾರ ಸಾರ್, ಚೆನ್ನಾಗಿದೀರ"

"ನಮಸ್ಕಾರಪ್ಪ ಹೇಳಿ ಕಳುಹಿಸಿದ ತಕ್ಷಣ ಬಂದರಲ್ಲ. ಬಹಳ ಸಂತೋಷ."

"ನೀವು ಹೇಳಿ ಕಳುಹಿಸಿದರೆ ಬರದೇ ಇರೋಕೆ ಸಾಧ್ಯವೇ ಸಾರ್, ಏನ್ಸಾರ್ ಅಷ್ಟು ಅರ್ಜೆಂಟು."

"ನೋಡೀಪ್ಪ, ನಿಮಗೆ ನಮ್ಮ ಯೂನಿವರ್ಸಿಟಿ ಸೇರಿಕೊಳ್ಳೋಕೆ ಇಷ್ಟಾ ಇದೆಯಾ ಅಂತ ವಿಚಾರಿಸೋಣಾ ಅಂತ ಹೇಳಿ ಕಳಿಸ್ದೆ."

"……………………………"

"ಯಾಕಪ್ಪಾ ಯೋಚಿಸ್ತಿದೀರಿ. ಹೆದರಿಕೋಬೇಡಿ. ನಿಮ್ಮ employmentಗೇನು ತೊಂದರೆ ಆಗೊಲ್ಲಾ. ವಾರಕ್ಕೆ ಒಂದು ಎರಡು ದಿವಸ ಮಧ್ಯಾಹ್ನದ ಹೊತ್ತಿನಲ್ಲಿ ಬಂದರೆ ಸಾಕು."

"ಸಂತೋಷವಾಗಿ ಒಪ್ಕೋತೀನಿ ಸಾರ್, ನಾನು ಈ ತರಹ ಛಾನ್ಸ್ ಸಿಕ್ಕುತ್ತಾ ಅಂದಕೋತಿದ್ದೆ. ತುಂಬಾ ಥ್ಯಾಂಕ್ಸ್ ಸಾರ್."

"ನೀವು ಯಾಕಪ್ಪಾ ಥ್ಯಾಂಕ್ಸ್ ಹೇಳಬೇಕು. ನಾನು ನಿಮಗೆ ಹೇಳಬೇಕು. ಅದಿರಲಿ, ನಾನು ನಿಮಗೆ ಯಾವ ಯಾವಾಗ ಬರಬೇಕೂ ಅಂತ ಫೋನ್‌ನಲ್ಲಿ ತಿಳಸ್ತೀನಿ, ಎರಡೆರಡು ದಿವಸಾ ಮುಂಚಿತವಾಗೇ ತಿಳಸ್ತೀನಿ. ಆವಾಗ ನೀವು ಬರಬಹುದು."

Thank you sir, ಸಾರ್, ನೀವು ಒಂದು ಚೀಟಿ ಕೊಟ್ಟು ಬಿಟ್ಟರೆ ನಾನು ಆಫೀಸಿಗೆ ಹೋಗಿ ಫೀಸು ಕಟ್ಟಿ ಬಿಡ್ತೀನಿ."

"ತಡೀರಿ! ತಡೀರೀ!! ಫೀಸೂ? ಏನು ನೀವು ಹೇಳೋದು? ನೀವು ಹೇಳೋದು ನನಗೆ ಅರ್ಥಾನೇ ಆಗ್ತಾ ಇಲ್ಲಾ."

"ಬಿ.ಎ. ಕ್ಲಾಸ್ಗೆ ಸೇರೋಕೆ ತಾನೇ ಸಾರ್, ನೀವು ಹೇಳಿದ್ದು."

“ಬಿ.ಎ. ಕ್ಲಾಸ್ಗೆ ಸೇರೋದೂ? ಏನ್ರೀ ನೀವು ಹೇಳೋದು! ನೀವೇನು, ನಿಮ್ಮ capability ಏನು, ಮೈ ಗಾಡ್! ನಾನು ನಿಮ್ಮನ್ನ ಕರೆಸಿದ್ದು, ಬಿ.ಎ. ಕ್ಲಾಸ್ಗೆ. ಸೇರೋಕೆ ಅಲ್ಲಾ, ಬಿ.ಎ.ಗೆ, ಹಾಗೂ ಡಿಪ್ಲೋಮಾ ಕ್ಲಾಸ್ಗೆ ಪಾಠ ಮಾಡೋಕೆ. ನಿಮ್ಮ talent ನಮ್ಮ ಯೂನಿವರ್ಸಿಟಿಗೂ ಉಪಯೋಗ ಆಗಲೀ ಅಂತಾ. ನೀವು ಒಪ್ಪಿಕೊಂಡರೆ ನನಗೆ ತುಂಬಾ ಸಂತೋಷ.”

“ಅಲ್ಲಾ ಸಾರ್, ನನಗೆ ಡ್ರೆಮಟಿಕ್ಸ್‌ನಲ್ಲಿ ಬೇಸಿಕ್ ಕ್ವಾಲಿಫಿಕೇಶನ್ ಇಲ್ಲಾ. ನಾನು ಹ್ಯಾಗೆ ಸಾರ್ ಕ್ಲಾಸ್ ತೊಗೊಳೋದು.”

“ನನಗೆ ಪೇಪರ್ ಕ್ವಾಲಿಫಿಕೇಷನ್ನು ಬೇಡ. You are capable - and more than that, needed for our university. ದಯವಿಟ್ಟು ಒಪ್ಪಿಕೊಳ್ಳಿ.”

“ಸಾರ್, ನಿಮಗೆ ನನ್ನ ಮೇಲೆ ಅಷ್ಟು ನಂಬಿಕೆ ಇದ್ದರೆ ಖಂಡಿತಾ ನಿಮ್ಮ ಒಪ್ಪಿಕೋತೀನಿ, ಹಾಗೂ ನಿಮ್ಮ ನಂಬಿಕೆ ಉಳಿಸಿಕೊಳ್ಳೋದಕ್ಕೆ ಪ್ರಯತ್ನ ಪಡ್ತೀನಿ.

“Then everything is settled. Hope to see you working with us shortly."

ಈ ಎರಡೂ ಸಂದರ್ಭಗಳಲ್ಲೂ ಕಾಣಿಸಿರುವ ವ್ಯಕ್ತಿ ಕನ್ನಡ ರಂಗಭೂಮಿಯ ಪ್ರತಿಭಾವಂತ ರಂಗಕರ್ಮಿ ಶ್ರೀ ಎಚ್.ವಿ.ವೆಂಕಟಸುಬ್ಬಯ್ಯ - ಬೆಂಗಳೂರಿನ ರಂಗ ಸಂಗಾತಿಗಳ ಪ್ರೀತಿಯ ಸುಬ್ಬಣ್ಣ. ಅವರ ನಾಟಕದ ಬದ್ಧತೆಯನ್ನು ಪದಗಳಲ್ಲಿ ವಿವರಿಸುವುದಕ್ಕಿಂತಾ, ಈ ಎರಡು ಪ್ರಸಂಗಗಳು ಹೆಚ್ಚು ಪರಿಣಾಮಕಾರಿ ಎಂದು ಕಾಣುತ್ತದೆ. ಕ್ರಿಯಾತ್ಮಕ ರಂಗ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಬಹಳಷ್ಟು ಮಂದಿ, ರಂಗ ಪ್ರಾಕಾರದ ಅನೇಕ ವರ್ಗಗಳಾದ ನಟನೆ, ನಿರ್ದೇಶನ, ರಂಗಸಜ್ಜಿಕೆ, ಉಡುಪು, ವರ್ಣಾಲಂಕಾರ, ವಿನ್ಯಾಸ ಪ್ರಚಾರ ಮುಂತಾದ ಅನೇಕ ವರ್ಗಗಳಲ್ಲಿ ಒಂದು, ಎರಡು ಅಥವಾ ಗರಿಷ್ಠ ಮೂರು ವರ್ಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರಾದರೂ ಸುಬ್ಬಣ್ಣನವರು ಪ್ರತಿಯೊಂದು ವರ್ಗದಲ್ಲೂ ತೊಡಗಿಕೊಂಡಿರುವುದಲ್ಲದೆ, ಸಾಮಾನ್ಯವಾಗಿ ರಂಗಭೂಮಿಯ ವ್ಯಾಪ್ತಿಗಿಂತ ಹೊರಗಿರುವ ರಂಗ ದಾಖಲೆಯಲ್ಲಿಯೂ ಸಹ ಕಾರ್ಯೋನ್ಮುಖರಾಗಿರುವುದು ಅವರ ವೈಶಿಷ್ಟ್ಯ.

**ಜನನ, ವಿದ್ಯಾಭ್ಯಾಸ ಇತ್ಯಾದಿ**

ಸುಬ್ಬಣ್ಣನವರ ಜನನ ೧೯೩೭ರ ಡಿಸೆಂಬರ್ ೧೮ ರಂದು. ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕು ಹಂಪಾಪುರ ಗ್ರಾಮದಲ್ಲಿ. ತಂದೆ ಎಚ್.ವೆಂಕಟರಾಮಯ್ಯ, ತಾಯಿ ರುಕ್ಮಿಣಮ್ಮ, ಐವರು ಸಹೋದರರು ಹಾಗೂ ಇಬ್ಬರು ಸಹೋದರಿಯರ ಪೈಕಿ ಸುಬ್ಬಣ್ಣ ಎರಡನೆಯವರು. ಹಂಪಾಪುರ ಒಂದು ಚಿಕ್ಕ ಗ್ರಾಮ. ಅಲ್ಲಿದ್ದುದು ಒಂದು ಸಣ್ಣ ಸರಕಾರೀ ಪ್ರೈಮರಿ ಶಾಲೆ. ಅದು ಬಿಟ್ಟರೆ ಸುಬ್ಬಣ್ಣನವರ ತಾತ ನಡೆಸುತ್ತಿದ್ದ 'ಕೂಲಿ ಮಠ' ಮಾತ್ರ. ಅವರ ತಾತನಿಗೆ, ಮಗ ಹುಟ್ಟಿದ ೧೬ನೆ ದಿನವೇ ಪತ್ನಿ ವಿಯೋಗ. ಆ ಮಗುವಿಗೆ ಮಲತಾಯಿಯನ್ನು ತರಲು ಇಚ್ಚಿಸದೆ, ಮರು ಮದುವೆ ಮಾಡಿಕೊಳ್ಳದೆ, ಮಗುವನ್ನು ನೋಡಿಕೊಳ್ಳಲು ದಾದಿಯೊಬ್ಬಳನ್ನು ನಿಯಮಿಸಿಕೊಂಡು, ತಾಯಿಯಿಲ್ಲದ ಮಗುವಿಗೆ ಕುರಿ

ಹಾಲು ಕುಡಿಸಿ ಮಗನನ್ನು ದೊಡ್ಡವನನ್ನಾಗಿ ಮಾಡಿದ್ದರು. ಆದುದರಿಂದಲೇ ಈ ತಾತನಿಗೆ ಮೊಮ್ಮಕ್ಕಳನ್ನು ಕಂಡರೆ ತುಂಬಾ ಪ್ರೀತಿ.

ಕೂಲಿಮಠದಲ್ಲಿ ವಿದ್ಯಾರ್ಥಿಗಳು ತಪ್ಪು ಮಾಡುತ್ತಿದ್ದಾಗ ಕೊಡುತ್ತಿದ್ದುದು "ಕೋದಂಡ" (ಹಗ್ಗದಲ್ಲಿ ತಲೆ ಕೆಳಗಾಗಿ ಕಟ್ಟಿ ಕೆಳಗೆ ಮೆಣಸಿನಕಾಯಿಯ ಹೊಗೆ ಹಾಕುತ್ತಿದ್ದುದು) ಮತ್ತು 'ಕುರ್ಚಿ ಕೂರಿಸು'ವಂಥಹ ಘೋರ ಶಿಕ್ಷೆಗಳು. ಕೂಲಿ ಮಠದಲ್ಲಿ, ಪ್ರತಿ ಶುಕ್ರವಾರದಂದು, ಸರಸ್ವತಿ ಪೂಜೆ ಮಾಡುವ ಸಂದರ್ಭದಲ್ಲಿ, ಹುಡುಗರನ್ನು 'ಬೆನಕ ಬೆನಕಾ ಏಕ ದಂತಾ' ಸ್ತುತಿಯನ್ನು ಲಯಬದ್ಧವಾಗಿ ಹೇಳಲು ಬಿಟ್ಟು, ತಾವು ಒಂದು ಉಂಡೆ ತೆಂಗಿನ ಕಾಯಿಯ ಮೇಲೆ ಕುಡುಗೋಲಿನ ಹಿಂಭಾಗದಿಂದ 'ಟಕ್ಕ-ಠಾಕ, ಟಕ್ಕ-ಠಾಕ' ಎಂದು ಲಯಬದ್ಧವಾಗಿ ಮೆಲ್ಲಗೆ ಕುಟ್ಟುತ್ತಾ, ಕರಟ ಮಾತ್ರ ಹೊರಬಂದು, ಕಾಯಿಯನ್ನು ಚೂರು ಚೂರು ಮಾಡಿ ಕಡಲೆ ಪುರಿಯ ಜೊತೆಗೆ ಬೆರೆಸಿ ಪ್ರಸಾದವಾಗಿ ಹಂಚಲು ತಯಾರಿ ನಡೆಸುತ್ತಿದ್ದರು. ತಾತನ ಕಟ್ಟುನಿಟ್ಟು ಶಿಸ್ತು ಮತ್ತು ಅವರು ಕೊಡುತ್ತಿದ್ದ ಘೋರ ಶಿಕ್ಷೆಗಳನ್ನು ನೋಡದಿರಲೆಂದು ಸುಬ್ಬಣ್ಣನ ತಾಯಿ ಅವರನ್ನು ಕೂಲಿ ಮಠದ ಕಡೆ ಕಳುಹಿಸುತ್ತಿರಲಿಲ್ಲ.

ಒಂದು ದಿನ ಬಾಲಕ ಸುಬ್ಬಣ್ಣ ಆಟಕ್ಕೋಸ್ಕರ ಒಂದು ಚೆಂಡು ಹೂವಿನ ಒಣಗಿದ ಗಿಡವನ್ನು ಬೇರು ಸಮೇತ ಕಿತ್ತು ಕೂಲಿ ಮಠದ ಕಡೆ ಬಂದರು. ಅಲ್ಲಿ ತಾತ ಪುಸ್ತಕವನ್ನು ಮುಖದ ಮುಂದೆ ಹಿಡಿದುಕೊಂಡು ಹುಡುಗರಿಗೆ ಪಾಠ ಹೇಳುವ ಕಾರ್ಯದಲ್ಲಿ ನಿರತರಾಗಿದ್ದರು. ತಾತನ ಹಿಂದೆ ನಿಂತು, ಆ ಗಿಡವನ್ನು ಚೇಷ್ಟೆಗೆಂದು ತಾತನ ಮುಖದ ಮುಂದೆ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಬೀಸಿದಾಗ, ಬೀಸಿದ್ದು ಪ್ರೀತಿಯ ಮೊಮ್ಮಗನೆಂದು ತಿಳಿಯದೆ ಆ ಗಿಡವನ್ನೇ ಕಿತ್ತುಕೊಂಡು, ಅದರ ಗೆಂಡೆಯಲ್ಲೇ ಹೊಡೆದು ನಂತರ ಪಶ್ಚಾತ್ತಾಪ ಪಟ್ಟಿದ್ದರು. ಈ ಘಟನೆಯನ್ನು ನೆನಪಿಸಿಕೊಂಡು, ಪ್ರೀತಿಯ ತಾತನಾದರೂ, ಕೂಲಿ ಮಠದಲ್ಲಿ, ತಪ್ಪಿಗೆ ಮಗುವಿಗೆ ಶಿಕ್ಷೆ ತಪ್ಪಿದ್ದಲ್ಲವೆಂಬ ಅನುಮಾನದಿಂದ ತಂದೆ ತಾಯಿಯರು ಸುಬ್ಬಣ್ಣನನ್ನು ಸರಕಾರೀ ಶಾಲೆಗೆ ಸೇರಿಸಿದರು.

ಹಳ್ಳಿಯಲ್ಲಿ ಇದ್ದುದು ನದಿಯ ಹಿನ್ನೀರು, ಆದುದರಿಂದಲೇ ಮಲೇರಿಯ ಕಾಟ. ಸ್ವಲ್ಪ ನೀರು ಬಂದರೆ ಸಾಕು, ಅನೇಕ ಮನೆಗಳು ನೀರಿನಿಂದ ಆವೃತವಾಗಿರುತ್ತಿದ್ದವು. ಒಂದು ರಸ್ತೆ ಮಾತ್ರ ಇಳಿಜಾರಾಗಿದ್ದು ಅದರ ಮೇಲ್ಭಾಗದ 'ಬೋರೆ'ಗೆ ಮಾತ್ರ ನೀರು ತಲುಪುತ್ತಲಿರಲಿಲ್ಲ. ಪ್ರತಿ ವರ್ಷವೂ ಈ ತೊಂದರೆಯಿಂದ ತಪ್ಪಿಸಿಕೊಳ್ಳಲು, ಕೆಲವರು 'ಬೋರೆ'ಯ ಜಾಗಕ್ಕೆ ವಾಸಸ್ಥಾನವನ್ನು ಬದಲಾಯಿಸುತ್ತಿದ್ದರು. ಕ್ರಮೇಣ ಕೆಲವರು ಅಲ್ಲೇ ಮನೆಗಳನ್ನು ಕಟ್ಟಿಕೊಂಡು ಮತ್ತು ಸರಕಾರದ ವಸತಿ ಸಮುಚ್ಛಯವೂ ಬಂದು ಈಗಿನ ಕೆ.ಆರ್.ನಗರಕ್ಕೆ ಮೂಲವಾದ ಎಡತೊರೆ ಪ್ರಾರಂಭವಾಯಿತು. ಸುಮಾರು ೧೯೪೩-೪೪, ಸುಬ್ಬಣ್ಣ ಮೂರನೆಯ ತರಗತಿಯಲ್ಲಿದ್ದಾಗ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಅವರ ತಂದೆ ಸಂಸಾರವನ್ನು ಎಡತೊರೆಗೆ ಬದಲಾಯಿಸಿದರು. ಊರಿನ ಅಂಚಿನಲ್ಲೇ ಅರ್ಕೇಶ್ವರ ದೇವಸ್ಥಾನ, ಎಡದಲ್ಲಿ ತೊರೆ ಕಾವೇರಿ, ಅಂತೆಯೇ ಊರಿನ ಹೆಸರು ಎಡತೊರೆ. ಪ್ರತಿ ವರ್ಷವೂ ಶಿವರಾತ್ರಿಯಂದು ಸೂರ್ಯನ ಬೆಳಕು ನೇರವಾಗಿ ಲಿಂಗದ ಮೇಲೆ ಬೀಳುತ್ತಿದ್ದುದು ಈ ದೇವಸ್ಥಾನದ ವೈಶಿಷ್ಟ್ಯ. ಪ್ರಕೃತಿ ಸೌಂದರ್ಯದ ನಡುವೆ ವಾಸಿಸುತ್ತಿದ್ದ ಅದೃಷ್ಟ ಈ ಊರಿನ ನಿವಾಸಿಗಳದು.

ನಾಟಕ, ಕಲೆ, ಸುಬ್ಬಣ್ಣನವರಿಗೆ ಪಿತ್ರಾರ್ಜಿತವೇನಲ್ಲ. ಸಂಪೂರ್ಣವಾಗಿ ಸ್ವಯಾರ್ಜಿತ. ತಲೆಮಾರಿನ ಹಿಂದೆ ದೂರದ ಸಂಬಂಧಿಯೊಬ್ಬರಿಗೆ ಯಕ್ಷಗಾನ ಕಲೆಯಲ್ಲಿ ಕೊಂಚ ಅಭಿರುಚಿಯಿತ್ತಾದರೂ ಪೂರ್ವಜರು ಯಾರಿಗೂ ನಾಟಕದಲ್ಲಿ ಪರಿಶ್ರಮವಿದ್ದಂತಿಲ್ಲ. ಆದರೆ ಇವರು ಬೆಳೆದ ವಾತಾವರಣದಲ್ಲಿ ನಾಟಕ ಕಲೆಗೆ ಬೇಕಾದ ವ್ಯಂಜನಗಳು ದೊರೆಯುವಂತಿದ್ದವು. ಆದರೆ ಇದೇ ವಾತಾವರಣದಲ್ಲಿ ಬಹಳಷ್ಟು ಮಂದಿ ಬೆಳೆದಿದ್ದರೂ ಪ್ರಯೋಜನ ಪಡೆದಿದ್ದು ಸುಬ್ಬಣ್ಣನಂತಹವರು ಮಾತ್ರ. ನಾಟಕ ಕಲೆಯನ್ನು ಬೋಧಿಸುವಂತಹ ಶಾಲೆಗಳಿಲ್ಲದ ಕಾಲದಲ್ಲು ಬಹಳಷ್ಟು ರಂಗ ಕರ್ಮಿಗಳು, ಹಿರಿಯರು ಅಥವಾ ತಜ್ಞರ ಮಾರ್ಗದರ್ಶನದಲ್ಲಿ ಪ್ರಾವೀಣ್ಯತೆ ಪಡೆಯುತ್ತಾರಾದರೂ, ಸುಬ್ಬಣ್ಣನವರು, ತಮ್ಮ ಸ್ವಂತ ಅಧ್ಯಯನದಿಂದ ಸ್ವಾವಲಂಬನೆಯನ್ನು ಸಾಧಿಸಿರುವುದು ಅವರ ಎಳೆ ವಯಸ್ಸಿನಲ್ಲಿಯೇ ಪ್ರಾರಂಭವಾಯಿತೆಂದು ಕಾಣುತ್ತದೆ.

ಚಿಕ್ಕ ವಯಸ್ಸಿನಲ್ಲಿಯೇ ಸುಬ್ಬಣ್ಣ, ನೆರೆಯವರಾದ ರಾಮ್ಸ್ವಾಮಿ ಥರ್ಮೋಕೋಲ್ ಇಲ್ಲದ ಕಾಲದಲ್ಲೂ ಕಾಗದ, ಬೆಂಡು ಕಡ್ಡಿ ಮುಂತಾದುವುಗಳಿಂದ ಮಂಟಪಗಳನ್ನು ತಯಾರಿಸುತ್ತಿದ್ದುದನ್ನು ಗಮನವಿಟ್ಟು ನೋಡುತ್ತಿದ್ದರು. ಅಂತೆಯೇ, ನಂಜುಂಡ ಶಾಸ್ತ್ರಿಗಳು ಅಚ್ಚುಕಟ್ಟಾಗಿ ವರ್ಣ ಚಿತ್ರಗಳನ್ನು ಬಿಡಿಸುತ್ತಿದ್ದುದು ಮತ್ತು ಯುವಕ ಸದಾಶಿವ (ಸದಾ) ಟೆಂಟ್ ಮಾದರಿಗಳನ್ನು ಮಾಡಿ ಪ್ರದರ್ಶಿಸತ್ತಿದ್ದುದನ್ನೂ ಗಮನಿಸುತ್ತಿದ್ದರು. ಅದರಲ್ಲೂ ಸದಾಶಿವ ಊರಿನ ಒಂದು ನಿರ್ದಿಷ್ಟ ಸ್ಥಳದಲ್ಲಿ ತಾನು ತಯಾರಿಸುತ್ತಿದ್ದ ಟೆಂಟ್ ಮಾದರಿಗಳ ಮೇಲೆ ಆನೆ ಕುದುರೆ ಇರುವ ಜಾಗ ಮುಂತಾದುವುಗಳನ್ನು ಎತ್ತಿ ತೋರಿಸುವಂತೆ ಮಾಡುತ್ತಿದ್ದುದನ್ನು ನೋಡಲು ಟಿಕೆಟ್ ದರ ೩ ಕಾಸು ಇಲ್ಲವೇ ೬ ಕಾಸು ಕೊಟ್ಟು ಸುಬ್ಬಣ್ಣ ಅನೇಕ ಬಾರಿ ವೀಕ್ಷಿಸುತ್ತಿದ್ದರು. ಕೈ ಕೆಲಸದಲ್ಲಿ ಇವರಿಗೆ ಆಸಕ್ತಿ ಹುಟ್ಟಿಸಿದ ಮತ್ತೊಬ್ಬರೆಂದರೆ ಸುಬ್ಬಣ್ಣನ ಸೋದರ ಮಾವ ಕಿಕ್ಕೇರಿ ರಾಮಕೃಷ್ಣ ಶರ್ಮರು. ಅವರು ತರಕಾರಿ ಮತ್ತು ಹಣ್ಣುಗಳಲ್ಲಿ ವಿವಿಧ ಆಕೃತಿಗಳನ್ನು ಮಾಡುತ್ತಿದ್ದರು. ಅವರು ಹಣ್ಣನ್ನು ಕಮಲದ ಆಕೃತಿಯಲ್ಲಿ ಬಿಡಿಸುತ್ತಿದ್ದುದು ನವರಾತ್ರಿ ಸಮಯದಲ್ಲಿ ಬೊಂಬೆಗಳ ಅಲಂಕಾರ ಮಾಡುವುದು ಹಾಗೂ ಅವರು ವಿಘ್ನೇಶ್ವರನ ಪೂಜೆಗೆ ಮಾಡುತ್ತಿದ್ದ ಅಲಂಕಾರ, ಸುಬ್ಬಣ್ಣನವರಿಗೆ ಅತ್ಯಂತ ಪ್ರಿಯ. ಸುಬ್ಬಣ್ಣನ ತಾಯಿ ಉತ್ತಮ ಕಸೂತಿ ಕೆಲಸಗಳನ್ನು ಮಾಡುತ್ತಿದ್ದು, ತಂದೆಯವರ ಸಹಕಾರದೊಂದಿಗೆ ಬೊಂಬೆಗಳಿಗೆ ವಸ್ತ್ರಾಲಂಕಾರವನ್ನೂ ಮಾಡುತ್ತಿದ್ದರು. ಇವೆಲ್ಲವನ್ನೂ ಹತ್ತಿರದಿಂದ ಗಮನಿಸುತ್ತಿದ್ದ ಸುಬ್ಬಣ್ಣನಿಗೆ ಕೈಕೆಲಸದಲ್ಲಿ ಎಳೆ ವಯಸ್ಸಿನಲ್ಲಿಯೇ ವಿಶೇಷ ಆಸಕ್ತಿ ಮೂಡಲಾರಂಭವಾಯಿತು.

ಶಾಲೆಯ ವಾತಾವರಣ ಸುಬ್ಬಣ್ಣನಿಗೆ ಹೇಳಿ ಮಾಡಿಸಿದಂತಿತ್ತು. ವಿಶಾಲವಾಗಿದ್ದ ಮುಖ್ಯೋಪಾಧ್ಯಾಯ ರಾಮಸ್ವಾಮಿಯವರ ಕೊಠಡಿಯಲ್ಲಿಯೇ ತರಗತಿಯೂ ನಡೆಯುತ್ತಿತ್ತು. ಶಾಲೆಯ ಕಾಗದ ಪತ್ರಗಳು ಮರದ ಕಪಾಟಿನಲ್ಲಿ, ಮಿಕ್ಕೆಲ್ಲಾ ಆಸ್ತಿಗಳೂ ಸಣ್ಣ ಸಣ್ಣ ಮರದ ಪೆಟ್ಟಿಗೆಗಳಲ್ಲಿ. ಕೆಲವು ವಿಷಯಗಳಲ್ಲಿ ೧-೩ ತರಗತಿಗಳನ್ನು ಒಟ್ಟಾಗಿ ಸೇರಿಸಿದಾಗ ಮರದ ಪೆಟ್ಟಿಗೆಗಳ ಮೇಲೂ ವಿದ್ಯಾರ್ಥಿಗಳು ಕೂರುತ್ತಿದ್ದರು. ಶಾಲೆಯ ಪ್ರಾರಂಭ ಅಂದಿನ ಮೈಸೂರು ರಾಜ್ಯದ ರಾಷ್ಟ್ರಗೀತೆ "ಕಾಯೌ ಶ್ರೀ ಗೌರೀ, ಕರುಣಾ ಲಹರೀ', 'ಸ್ವಾಮಿ ದೇವನೆ ಲೋಕಪಾಲನೆ' ಮತ್ತು 'ಶಾಲೆಗಾಂ ಪೋಪೇಮ್' ಮುಂತಾದ ಇಂದಿಗೂ ನೆನೆಸಿಕೊಳ್ಳಬಹುದಾದ ಹಾಡುಗಳನ್ನು ವಿದ್ಯಾರ್ಥಿಗಳು ರಾಗವಾಗಿ ಹಾಡುವುದರಿಂದ.

ಶಾಲೆಯಲ್ಲಿ ಸುಬ್ಬಣ್ಣನಿಗೆ ಮಾದರಿ ಉಪಾಧ್ಯಾಯರುಗಳಲ್ಲಿ ಶ್ರೀ ಹ್ಯಾಂಡ್ ಡ್ರಾಯಿಂಗ್ ಮಾಡುತ್ತಿದ್ದ ರಸಾಯನ ಶಾಸ್ತ್ರ ಪಾಠ ಮಾಡುತ್ತಿದ್ದ ವಿ.ಎಸ್.ಕೃಷ್ಣಶಾಸ್ತ್ರಿಗಳು ಒಬ್ಬರು. ಸುಬ್ಬಣ್ಣ ಫ್ರೀ ಹ್ಯಾಂಡ್ ಡ್ರಾಯಿಂಗನ್ನು ರೂಢಿಸಿಕೊಂಡು ಈ ಕಲೆಯನ್ನು ರಂಗಭೂಮಿಗೆ ಯಥೇಚ್ಛವಾಗಿ ಬಳಸಿಕೊಂಡಿದ್ದಾರೆ. ಭೂಗೋಳದ ಪಾಠ ಮಾಡುತ್ತಿದ್ದ ವೈ.ಎನ್.ಕೆಯವರು ಅತ್ಯುತ್ಸಾಹದಿಂದ ಬೋಧಿಸುತ್ತಿದ್ದುದಕ್ಕೆ ಸ್ಪಂದಿಸಿ ಸುಬ್ಬಣ್ಣ ದಾಳಿಂಬೆ, ಹಸಿರೆಲೆ, ನೇರಳೆ ಮುಂತಾದುವುಗಳ ರಸವನ್ನು ಉಪಯೋಗಿಸಿ ವರ್ಣ ರಂಜಿತ ಮ್ಯಾಪ್ ಡ್ರಾಯಿಂಗ್ ಮಾಡಿ ಚಿಕ್ಕ ವಯಸ್ಸಿನಲ್ಲಿಯೇ ಶಹಬಾಸ್‌ಗಿರಿ ಪಡೆದಿದ್ದರು. ಮುನ್ಸಿಪಲ್ ಕಟ್ಟಡದ ಮುಂಭಾಗದ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ಹಿರಿಯರು ನಡೆಸುತ್ತಿದ್ದ ನಾಟಕಕ್ಕೆ ಸದಾಶಿವ, ಟಿನ್ ಹಾಳೆಯಿಂದ ೧೦೦ ವ್ಯಾಟ್ ಎಲೆಕ್ಟ್ರಿಕ್ ದೀಪಗಳ ಬೆಳಕು ಪ್ರತಿಫಲಿಸುವಂತೆ ಮಾಡಿ ಆಡುವ ಸ್ಥಳ ಚೆನ್ನಾಗಿ ಕಾಣುವಂತೆ ಮಾಡುತ್ತಿದ್ದುದು ಸುಬ್ಬಣ್ಣನಿಗೆ 'ಬೆಳಕು' ವಿಷಯಕ್ಕೆ ಸ್ಫೂರ್ತಿ ನೀಡಿತು.

ಶಾಲೆಯ ಉಪಾಧ್ಯಾಯರುಗಳಲ್ಲಿ ವೀರಪ್ಪ ಕನ್ನಡಿಗ, ಬಿ.ಎಮ್.ಶ್ರೀ ಶಿಷ್ಯರು. ಸಂಸ್ಕೃತದ ಬಾಲಗಣಪತಿ ಭಟ್ ನಾಟಕಗಳನ್ನು ಮಾಡಿಸುತ್ತಿದ್ದರು. ಕೆ.ಆರ್.ನಗರಗಳಲ್ಲಿ ಒಂದು ಬಿದಿರಿನ ತಡಿಕೆಯಲ್ಲಿ ತಯಾರಿಸಿದ ಒಂದು ನಾಟಕ ಮನೆ ಇದ್ದು, ಕಂಪೆನಿ ನಾಟಕದವರು ಆಗಾಗ್ಯೆ ಅಲ್ಲಿ ಮೊಕ್ಕಾಂ ಮಾಡುತ್ತಿದ್ದರು. ಸುಬ್ಬಣ್ಣ, ಅವಕಾಶ ಸಿಕ್ಕಾಗ ಈ ಕಂಪೆನಿ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದರು. ಅವರಿಗೆ ಸಿಕ್ಕುತ್ತಿದ್ದುದು ಸಾಮಾನ್ಯವಾಗಿ ಹೆಣ್ಣು ಪಾತ್ರಗಳು. ಶಾಲೆಯಲ್ಲಿಯೂ ಅವರಿಗೆ ದೊರೆಯುತ್ತಿದ್ದುದು ಹೆಣ್ಣು ಪಾತ್ರಗಳೆ. ಹೋಟೆಲ್ ಅನಂತ ಪದ್ಮನಾಭರಾಯರು ಊರಿನ ಉಪಾಧ್ಯಾಯ ವರ್ಗದವರೊಂದಿಗೆ ಪ್ರದರ್ಶಿಸಿದ ಬಿ.ಎಮ್. ಶ್ರೀಯವರ 'ಗದಾಯುದ್ಧ' ನಾಟಕದಲ್ಲಿ ಸುಬ್ಬಣ್ಣನವರು ದ್ರೌಪದಿ ಪಾತ್ರವನ್ನು ವಹಿಸಿದ್ದರು. ಆಗ ತಾವು ಕಲಿತಿದ್ದ ಕೈ ಚಳಕವನ್ನೆಲ್ಲ ಉಪಯೋಗಿಸಿ ಚಕ್ಕೋತ ಹಣ್ಣಿನ ಸಿಪ್ಪೆಯನ್ನು ತೆಗೆದು ಗುಲಾಬಿ ಬಣ್ಣದ ಒಳ ಉಂಡೆಯನ್ನು ಉಪಯೋಗಿಸಿ ತಯಾರಿಸಿದ್ದ ಉಪಪಾಂಡವರ ತಲೆಗಳನ್ನು ಸುಬ್ಬಣ್ಣನವರು ಇಂದಿಗೂ ಜ್ಞಾಪಿಸಿಕೊಳ್ಳುತ್ತಾರೆ.

ಬೌದ್ಧಿಕ ಹಾಗೂ ನೈತಿಕ ನೆಲೆಯಲ್ಲಿ ಬೆಳೆಯಲು ಕಾರಣರಾದವರಲ್ಲಿ ಮುಖ್ಯರಾದವರು ಪ್ರೌಢಶಾಲೆ ಉಪಾಧ್ಯಾಯ ರಾಮಪ್ರಿಯರವರು. ಮೈಸೂರಿನಲ್ಲಿ ಮಹಾರಾಜಾ ಕಾಲೇಜಿನಲ್ಲಿ ತತ್ವಶಾಸ್ತ್ರದ ಪ್ರಾಚಾರ್ಯರಾಗಿದ್ದ ಯಮುನಾಚಾರ್ಯರ ಅಣ್ಣ. ಇವರು ಊರಿನ ಮಕ್ಕಳಿಗೆ ಬೋಧಿಸುತ್ತಿದ್ದುದು ‘Enter in to learn, go forth to serve'. ಇಂತಹ ಉದಾತ್ತ ವಾತಾವರಣದಲ್ಲಿ ಬೆಳೆದ ಮಕ್ಕಳು ಜೀವನದಲ್ಲೂ ಉದಾತ್ತತೆಯನ್ನು ರೂಢಿಸಿಕೊಳ್ಳುವ ಸಂಭವ ಹೆಚ್ಚೆಂದೇ ಹೇಳಬೇಕು.

ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದ ನಂತರ ಸುಬ್ಬಣ್ಣ ಅನಿವಾರ್ಯವಾಗಿ ಶಾರದಾ ವಿಲಾಸ್ ಕಾಲೇಜ್ ಸೇರಲು ಮೈಸೂರಿಗೆ ಬರಬೇಕಾಯಿತು. ಹೊಯ್ಸಳ ಕರ್ನಾಟಕ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಸುಲಭವಾಗಿ ಸಿಕ್ಕಿದ್ದಲ್ಲದೆ, ತಂದೆಯವರು ನಿಲಯಕ್ಕೆ, ದಾನಿಗಳಿಂದ ಸಂದಾಯವಾಗುತ್ತಿದ್ದ ಭತ್ತವನ್ನು ನಿಯಮಿತವಾಗಿ ಸರಬರಾಜು ಮಾಡುತ್ತಿದ್ದುದರಿಂದ ಸುಬ್ಬಣ್ಣನವರಿಗೆ ಕೊಂಚ ವಿಶಾಲವಾದ ಹಾಗೂ ಪ್ರತ್ಯೇಕವಾಗಿದ್ದ ಒಂದು ಕೊಠಡಿಯೂ ದೊರೆಯಿತು. ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ ಹಾಗೂ ನಾಟಕಗಳಲ್ಲಿ ತೊಡಗಿಸಿಕೊಂಡಿದ್ದ ಅನಂತರಾಮ್ ಮಚ್ಚೇರಿಯವರುಗಳು ಅದೇ ನಿಲಯದಲ್ಲಿ ವಾಸ್ತವ್ಯವನ್ನು ಹೊಂದಿದ್ದರು. ಅಡಿಗೆ ಭಟ್ಟ ಸುಬ್ಬಕೃಷ್ಣನಿಗೂ ನಾಟಕದ

ಖಯಾಲಿ. ಆಕಾಶವಾಣಿಯಲ್ಲಿದ್ದ ಬಿಳಿಕೆರೆ ನೀಲಕಂಠರಾಯರ ತಮ್ಮ ಇವರ ನಾಟಕದ ಗೆಳೆಯ. ಹಾಸ್ಟೆಲ್ನಲ್ಲಿ ಹಾಗೂ ದಸರಾ ಎಕ್ಸಿಬಿಷನ್ ರಂಗಮಂದಿರಗಳಲ್ಲಿ ವರ್ಷಕ್ಕೆ ೩-೪ ನಾಟಕಗಳಲ್ಲಿ ಸುಬ್ಬಣ್ಣ ಅಭಿನಯಿಸುತ್ತಿದ್ದರು. ಒಂದು ಬಾರಿ ಕೆ.ಆರ್.ಕೃಷ್ಣಪ್ಪನವರ ಜೊತೆಯಲ್ಲಿ ಹೆಣ್ಣು ಪಾತ್ರ ವಹಿಸಿ, ಪ್ರದರ್ಶನ ಮುಗಿದ ಮೇಲೆ ಅವರಿಬ್ಬರೂ ಫೋಟೋ ತೆಗೆಸಿಕೊಳ್ಳಲು ಸ್ಟುಡಿಯೋಗೆ ಹೋಗುತ್ತಿದ್ದಾಗ ಸುಬ್ಬಣ್ಣನನ್ನು ಹೆಣ್ಣೆಂದು ತಿಳಿದು, ಕೆಲವು ಪುಂಡರು ಚುಡಾಯಿಸಿ, ದಬ್ಬಿಗೊಂಡು ಹೋಗಿ, ಸ್ವಲ್ಪ ದೂರಕ್ಕೆ ಹೋದ ನಂತರ 'ಏ ಅದು ಹೆಣ್ಣಲ್ಲ ಕಣೋ, ಗಂಡು!' ಅಂದರಂತೆ.

ಎಳೆ ವಯಸ್ಸಿನಲ್ಲಿಯೇ ಸುಬ್ಬಣ್ಣನ ಮತ್ತೊಂದು ಮುಖವೆಂದರೆ, ಅವರ ಶಾಲಾ ಜೀವನದಲ್ಲಿ ಖೋ-ಖೋ, ಕಬ್ಬಡಿ ಮುಂತಾದ ಕ್ರೀಡೆಗಳಲ್ಲಿ ಭಾಗವಹಿಸುತ್ತಿದ್ದುದು. ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ಪಡೆದ ನಂತರ ಹಾಸ್ಟೆಲ್ ಡೇ ಸ್ಪೋರ್ಟ್ಸ್‌ನಲ್ಲೂ ಭಾಗವಹಿಸುತ್ತಿದ್ದರು. ಹುಡುಗಾಟಿಕೆಯಲ್ಲೂ ಸುಬ್ಬಣ್ಣ ಮುಂಚೂಣಿಯಲ್ಲಿಯೇ ಇರುತ್ತಿದ್ದರು. ಎಳ ನೀರಿಗೆ ಕಾಯಿ ಕೀಳುವಾಗ ೧೫ ಅಡಿ ಎತ್ತರದಿಂದ ಜಾರಿ ಬಿದ್ದು ಅಲ್ಪ ಹಾನಿಯಿಂದ ಬಚಾವಾಗಿದ್ದುದು ಇವರ ಅದೃಷ್ಟ. ಇವರನ್ನು ಪುಸಲಾಯಿಸಿ ಮರ ಹತ್ತಿಸಿದ್ದು ಇವರ ಹಾಸ್ಟೆಲ್ ಗೆಳೆಯರು. ಹಾಸ್ಟೆಲ್ ವಾರ್ಡನ್ ಸೀತಾರಾಮಯ್ಯ. ಸುಬ್ಬಣ್ಣನವರು ಮರ ಹತ್ತಿದ್ದಾಗ ನೋಡಿದರೂ ಏನೂ ಮಾತನಾಡದೆ ತಮ್ಮ ಕೊಠಡಿ ಸೇರಿಬಿಟ್ಟಿದ್ದರು. ಆದರೆ ೩ ತಿಂಗಳ ನಂತರ ಅವರನ್ನು ಕರೆಸಿ ಹಿಗ್ಗಾ-ಮುಗ್ಗಾ ಬೈದದ್ದು ಸುಬ್ಬಣ್ಣನವರಿಗೆ ಇಂದಿಗೂ ಜ್ಞಾಪಕದಲ್ಲಿದೆ.

ಒಮ್ಮೆ ಪರೀಕ್ಷೆ ಸಮಯದಲ್ಲಿ ಒಂದು ಚಲನಚಿತ್ರವನ್ನು ನೋಡಿ ಹಾಸ್ಟೆಲ್‌ಗೆ ಹಿಂತಿರುಗಿದಾಗ ಬೇರೆ ವಿದ್ಯಾರ್ಥಿಗಳು ಪುಸ್ತಕ ವ್ಯಾಸಂಗದಲ್ಲಿ ತೊಡಗಿದ್ದರು. ಆ ಸರಿ ರಾತ್ರಿಯಲ್ಲಿ ಹುಡುಗಾಟಿಕೆಯಿಂದ, ಗಲ್ಲಿಯಲ್ಲಿ ನಿಂತು ಕಿಟಕಿಯ ಗಾಜಿಗೆ ಕಲ್ಲು ಹೊಡೆದು ಗುಂಪು ಕಟ್ಟಿಕೊಂಡು, ಆವರಣದಿಂದ ಹೊರಬರದೆ ಗುಸುಗುಟ್ಟುತ್ತಿದ್ದರು. ಆ ಸಮಯದಲ್ಲಿ ಸುಬ್ಬಣ್ಣ ಮೆಲ್ಲಗೆ ಚಪ್ಪಡಿ ಕಲ್ಲು ಪಕ್ಕಕ್ಕೆ ಸರಿಸಿ ಕೊಠಡಿ ಸೇರಿಕೊಂಡರು. ಸರ ಸರ ಸದ್ದು ಕೇಳಿ ಯಾರೋ ಓಡಾಡುತ್ತಿದ್ದಾರೆಂದು ಹುಡುಗರಿಗೆ ಅರಿವಾಯಿತು. ಏನು ಮಾಡಲೂ ತೋಚದೆ ಅಟ್ಟದ ಮೇಲೆ ಹಾಸ್ಟೆಲ್ ಕಮಿಟಿ ಸದಸ್ಯ ನವಜ್ಯೋತಿ ಸ್ಟುಡಿಯೋದ ರಾಮಯ್ಯನವರು ಶೇಖರಿಸಿದ್ದ ಕತ್ತಿ, ಗುರಾಣಿಗಳನ್ನು ಹಿಡಿದುಕೊಂಡು, ಅವರ ಕಲ್ಪನೆಯ ಕಳ್ಳನನ್ನು ಅಟ್ಟಿಸಿಕೊಂಡು ಹೋದಾಗ, ಸುಬ್ಬಣ್ಣನೂ ಅವರ ಜೊತೆಗೇ ಕಳ್ಳನನ್ನು ಹಿಡಿಯಲು ಹೋಗಿದ್ದುದು ಸುಬ್ಬಣ್ಣನವರ ಸಾಹಸಗಳಲ್ಲಿ ಒಂದು. ಕೆಲವು ಸಮಯದ ನಂತರ ಅವರ ಸಾಹಸ ಪತ್ತೆಯಾದಾಗ ಸುಬ್ಬಣ್ಣನನ್ನು ಇನ್ನು ಯಾವಾಗಲಾದರೂ ನೀನು ಹೀಗೆ ಮಾಡಿದರೆ ಕೈ-ಕಾಲು ಮುರೀತೀವಿ, ಎಂದು ಎಚ್ಚರಿಸಿದ್ದರು. ಇಂತಹ ಸುಬ್ಬಣ್ಣ ಹೆಣ್ಣೆಂದು ಚುಡಾಯಿಸಿಕೊಂಡುದನ್ನು ವಿನೋದವೆಂದು ಪರಿಗಣಿಸಿದ್ದು ಆಶ್ಚರ್ಯವೇನಲ್ಲ.

೧೯೫೭ರಲ್ಲಿ ಕೆ.ಆರ್.ನಗರದಲ್ಲಿ ಇವರ ಮನೆಯ ಸಮೀಪದಲ್ಲೇ ವಾಸಿಸುತ್ತಿದ್ದ ಅರ್ಕನಾಥ್‌ರವರು ಶಾರದಾ ವಿಲಾಸ್ ಕಾಲೇಜಿಗೆ ಭೌತಶಾಸ್ತ್ರದ ಅಧ್ಯಾಪಕರಾಗಿ ಸೇರಿದ್ದು ಸುಬ್ಬಣ್ಣನವರ ಜೀವನಕ್ಕೆ ಒಂದು ಹೊಸ ತಿರುವನ್ನು ಕೊಟ್ಟಂತಾಯಿತು. ಆರ್.ಎಸ್.ಎಸ್.ನಲ್ಲಿ ಸಕ್ರಿಯವಾಗಿದ್ದ ಅರ್ಕನಾಥ್‌ರವರು ಅದರ ವತಿಯಿಂದ ಕೊಂಚ ಕಾಲ ಸೆರೆಮನೆ ವಾಸವನ್ನೂ ಅನುಭವಿಸಿದ್ದಂತಹಾ ವ್ಯಕ್ತಿ. ಸುಬ್ಬಣ್ಣನೂ ಅಲ್ಪ ಕಾಲ ಕೆ.ಆರ್.ನಗರದಲ್ಲಿದ್ದಾಗ ಆರ್.ಎಸ್.ಎಸ್.ಸೇರಿದ್ದರು. ಪ್ರೊ.ಎಚ್.ಎಮ್.ಶಂಕರನಾರಾಯಣರಾಯರು ವಾಸಿಸುತ್ತಿದ್ದ ಮನೆಯ ಮಹಡಿಯಲ್ಲಿನ ಒಂದು ಕೊಠಡಿಯಲ್ಲಿ ಅರ್ಕನಾಥ್ ಮತ್ತು ಅವರ ತಮ್ಮ ಮೂರ್ತಿ ತಾತ್ಕಾಲಿಕವಾಗಿ ವಾಸಿಸುತ್ತಿದ್ದರು. ಅರ್ಕನಾಥರ

ಆಹ್ವಾನದ ಮೇರೆಗೆ ಸುಬ್ಬಣ್ಣ ಹಾಸ್ಟೆಲ್ ಜೀವನಕ್ಕೆ ವಿದಾಯ ಹೇಳಿ, ಸೈನ್ಸ್ ಮತ್ತು ಮ್ಯಾಥ್ಸ್ ಮನೆ ಪಾಠವೂ ದೊರೆಯುತ್ತದೆಂದು ಶಂಕರನಾರಾಯಣರಾಯರ ಮನೆ 'ಶಾರದಾ ಮಂದಿರ'ದಲ್ಲೇ ವಾಸ್ತವ್ಯವನ್ನು ಪಡೆದರು.

ಅತಿಥಿ ಸತ್ಕಾರಕ್ಕೆ ಹೆಸರಾಗಿದ್ದ ಶಂಕರನಾರಾಯಣರಾಯರ ಮನೆಯಲ್ಲಿ ಯಾವಾಗಲೂ ಕೆಲವು ವಿದ್ಯಾರ್ಥಿಗಳು ಇರುತ್ತಿದ್ದರು. ಪರೀಕ್ಷೆಯ ಸಮಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇನ್ನೂ ಹೆಚ್ಚುತ್ತಿದ್ದಿತು. ಅಲ್ಲಿನ ವಾತಾವರಣವೇ ಬೌದ್ಧಿಕವಾಗಿ ಅಸೂಯೆ ತರಿಸುವಂತಹುದು. ಮುಂದೆ 'ಸೇವಾರ್ಕ'ರೆಂದೇ ಪ್ರಸಿದ್ಧರಾದ ಅರ್ಕನಾಥ್‌ರವರ ಜೊತೆ ಮನೆಯಲ್ಲೇ ಕನ್ನಡ ದಿಗ್ಗಜರಾದ ಎಚ್.ಎಮ್.ಶಂಕರನಾರಾಯಣ ರಾವ್ ಹಾಗೂ ನೆರೆಯಲ್ಲಿ ಎಸ್.ವಿ.ಪರಮೇಶ್ವರ ಭಟ್ಟರು ಮತ್ತು ಮನೆಯಲ್ಲಿ ಸೇರುತ್ತಿದ್ದ ಮೈಸೂರಿನ ಪ್ರಸಿದ್ಧ ಕನ್ನಡ ವಿದ್ವಾಂಸರುಗಳು. ಇವರೆಲ್ಲರ ಸಹವಾಸದಿಂದ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ನಡೆಯುತ್ತಿದ್ದ ನಾಟಕಗಳ ವೀಕ್ಷಣೆ, ೧೦೦ ಅಡಿ ರಸ್ತೆಯಲ್ಲಿ ಬಾಡಿಗೆ ಮನೆಯೊಂದರಲ್ಲಿ ಗುಬ್ಬಿ ನಾಟಕ ಕಂಪನಿಯವರು ರಿಹರ್ಸಲ್ ನಡೆಸುತ್ತಿದ್ದರು. ಪಿ.ಕಾಳಿಂಗರಾಯರ ಸಂಗೀತ ನಿರ್ದೇಶನ, ಹಾಡುಗಾರಿಕೆ - ಕೇಳಬೇಕೇ, ಸಮಯ ಸಿಕ್ಕಿದಾಗಲೆಲ್ಲಾ ಸುಬ್ಬಣ್ಣನವರಿಂದ ಅವರ ಭಾವ ಎಮ್.ವಿ.ವೆಂಕಟಕೃಷ್ಣ ಅವರ ಜೊತೆ ನಾಟಕದ ರಿಹರ್ಸಲ್ ವೀಕ್ಷಣೆ.

ಈ ಎಲ್ಲಾ ಹವ್ಯಾಸಗಳ ಮಧ್ಯೆ ಸುಬ್ಬಣ್ಣನವರಿಗೆ ಇಂಟರ್ಮೀಡಿಯೆಟ್ ಪಾಸ್ ಮಾಡುವುದು ಮರೆತೇ ಹೋಗಿತ್ತೆಂದು ಕಾಣುತ್ತದೆ. ವ್ಯಾಸಂಗ ಮುಂದುವರಿಸುವುದು ವಿಜ್ಞಾನ ವಿಭಾಗದಲ್ಲೋ ಇಲ್ಲಾ ಕಲೆ ವಿಭಾಗದಲ್ಲೋ ಅಥವಾ ಈ ದಾರಿಯನ್ನೇ ಬಿಟ್ಟು ಚಲನಚಿತ್ರ ಅಥವಾ ಸೌಂಡ್ ಎಂಜಿನಿಯರಿಂಗ್ ದಾರಿ ಹಿಡಿಯುವುದೋ ಎನ್ನುವ ಗೊಂದಲದಲ್ಲಿದ್ದಾಗ, ಅವರ ತಂದೆಯ ಸ್ನೇಹಿತರ ಮಗ ಪಾರ್ಥ 'ಸುಬ್ಬಣ್ಣಾ, ಕಾಲೇಜು ವ್ಯಾಸಂಗ ಬೇಡ, ಮರ್ಯಾದೆಯಾಗಿ ಪಾಲಿಟೆಕ್ನಿಕ್ ಸೇರಿಬಿಡು' ಎಂದು ಹೇಳಿದರಂತೆ. ಸುಬ್ಬಣ್ಣ ೧೯೫೮ರಲ್ಲಿ ಬೆಂಗಳೂರಿನ ಎಸ್.ಜೆ.ಪಾಲಿಟೆಕ್ನಿಕ್‌ನಲ್ಲಿ ಸೌಂಡ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಯಾಗಿ ಸೇರಿದರು. ಪಾರ್ಥರ ಪರಿಚಯದವರೇ ಆದ ಎಮ್.ರಾಮಮೂರ್ತಿ (ಸರ್ ಎಮ್.ವಿ.ಯವರ ಸಂಬಂಧಿ) ಮತ್ತು ಕೇಶವಮೂರ್ತಿ ಅದೇ ವಿಭಾಗದಲ್ಲೇ ಉಪಾಧ್ಯಾಯರುಗಳು, ಟಿ.ದ್ವಾರಕಾನಾಥ್, ಸೌಂಡ್, ಫಿಲಂ ಹಾಗೂ ರೇಡಿಯೋ ಅಂಗಡಿ ಮಳಿಗೆಯ ಮೇಲಿನ ಕೊಠಡಿಯಲ್ಲಿ ಪಾರ್ಥರ ತಮ್ಮ ಗುರು (ಎಮ್.ಕೆ.ಗುರುರಾಜರಾವ್) ಜೊತೆ ವಾಸ್ತವ್ಯ.

ಮೈಸೂರಿನ ಸಾಂಸ್ಕೃತಿಕ ವಾತಾವರಣದಿಂದ ಬೆಂಗಳೂರಿಗೆ ಬಂದ ಸುಬ್ಬಣ್ಣನ ಮನಸ್ಸಿನಲ್ಲಿ ಕೊರೆಯುತ್ತಿದ್ದುದು ಒಂದೇ ಯೋಚನೆ. ರಂಗಭೂಮಿಯಲ್ಲಿ ದುಡಿಯಲು ಮೈಸೂರಿನಲ್ಲಿದ್ದಷ್ಟು ಅವಕಾಶಗಳು ಬೆಂಗಳೂರಿನಲ್ಲಿ ಇವೆಯೋ ಇಲ್ಲವೋ ಎಂದು. ವಸತಿ ಮತ್ತು ಊಟೋಪಚಾರದ ಬಗ್ಗೆ ಅವರು ತಲೆ ಕೆಡಿಸಿಕೊಳ್ಳಲಿಲ್ಲ. ಪಾರ್ಥರವರ ಇರುವಿಕೆಯಿಂದ ಅವರಿಗೆ ಬೇಕಾದ ಅನುಕೂಲತೆಗಳು ದೊರೆತಿದ್ದವು.

**ಉಲ್ಲಾಳ್ ಶೀಲ್ಡ್ ನಾಟಕ ಸ್ಪರ್ಧೆ**

ಪಾಲಿಟೆಕ್ನಿಕ್‌ನಲ್ಲಿ ನಾಟಕವೂ ಸಂಸ್ಥೆಯ ಪತ್ಯೇತರ ಚಟುವಟಿಕೆಗಳಲ್ಲಿ ಒಂದಾದುದರಿಂದ ಸಂಸ್ಥೆಯಲ್ಲಿ ವರ್ಷಕ್ಕೆ ೪-೫ ನಾಟಕಗಳನ್ನಾಡಿಸುವುದು ಅಷ್ಟೇನೂ ಕಷ್ಟವಲ್ಲದಿದ್ದರೂ, ಆ ಸಮಯದಲ್ಲಾಗಲೇ ಸುಬ್ಬಣ್ಣನವರು ಕ್ರಿಯಾಶೀಲ ರಂಗಭೂಮಿಗೆ ಹೆಚ್ಚು ಒಲವು ತೋರುತ್ತಿದ್ದುದರಿಂದ ಅವರು ಅನ್ಯ ಮಾರ್ಗಗಳ ಅನ್ವೇಷಣೆಗೆ ಪ್ರಯತ್ನಿಸುತ್ತಿದ್ದರು. ಆಗ ಅವರ ಗಮನಕ್ಕೆ ಬಂದಿದ್ದು ಟೌನ್‌ಹಾಲ್, ಚೇಂಬರ್ ಆಫ್ ಕಾಮರ್ಸ್ ಮುಂತಾದೆಡೆ ನಾಟ್ಯ ಸಂಘದವರು ವಾರ್ಷಿಕವಾಗಿ ಪ್ರಾಯೋಜಿಸುತ್ತಿದ್ದ ಉಲ್ಲಾಳ್‌ಶೀಲ್ಡ್ ನಾಟಕ ಸ್ಪರ್ಧೆ. ಆದರೆ ಅಲ್ಲಿ ಸ್ಪರ್ಧಿಸಲು ಅವಕಾಶವಿದ್ದುದು ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ. ಇಂಟರ್ಮೀಡಿಯೆಟ್ಟಿಂದ ಪ್ರಾರಂಭವಾಗಿ, ವಿಜ್ಞಾನ ಅಥವಾ ಕಲಾವಿಭಾಗವಷ್ಟೇ ಅಲ್ಲದೆ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿ ಕಾಲೇಜ್ ವಿದ್ಯಾರ್ಥಿಗಳಿಗೆ ಮಾತ್ರ ಇಲ್ಲಿ ಅವಕಾಶವಿತ್ತು. ಆದರೆ ಎಂಜಿನಿಯರಿಂಗ್ ಡಿಪ್ಲಮೋ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಪ್ರವೇಶವಿರಲಿಲ್ಲ. ಇದು ಸುಬ್ಬಣ್ಣನವರ ಅಭಿಪ್ರಾಯದಲ್ಲಿ ಪಕ್ಷಪಾತಭಾವನೆ. ಕಾರಣ ಇಷ್ಟೆ, ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳ ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಪದವೀಧರರಾಗಿಯೂ ವಿದ್ಯಾರ್ಥಿಗಳಾಗಿದ್ದವರು ಕೆಲವೇ ಮಂದಿ. ಶೇಕಡಾ ೯೭೯೮ ರಷ್ಟು ವಿದ್ಯಾರ್ಥಿಗಳು ಅಂಡರ್ ಗ್ರಾಜುಯೇಟ್ಸ್. ಈ ಎಲ್ಲಾ ಅರ್ಹತೆಗಳನ್ನೂ ಪಾಲಿಟೆಕ್ನಿಕ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳೂ ಹೊಂದಿದ್ದರು. ನಾಟಕದ ಬಗ್ಗೆ ಕ್ರಾಂತಿ ಮನೋಭಾವವನ್ನೇ ಹೊಂದಿದ್ದ ಸುಬ್ಬಣ್ಣನವರಿಗೆ ಇದನ್ನು ಸಹಿಸಲು ಅಸಾಧ್ಯವಾಗಿತ್ತು. ತಕ್ಷಣ ಸಂಬಂಧಪಟ್ಟ ಅಧಿಕಾರಿಗಳೊಡನೆ ಈ ವಿಷಯವನ್ನು ಮನಮುಟ್ಟುವಂತೆ ಚರ್ಚಿಸಿದರು. ಅವರು ಮಂಡಿಸಿದ ತರ್ಕವನ್ನು ಒಪ್ಪಿಕೊಂಡ ಅಧಿಕಾರಿಗಳು ತಕ್ಷಣದಿಂದಲೇ ಜಾರಿಗೆ ಬರುವಂತೆ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೂ ಉಲ್ಲಾಳ್‌ಶೀಲ್ಡ್ ನಾಟಕ ಸ್ಪರ್ಧೆಯಲ್ಲಿ ಅವಕಾಶವನ್ನು ಕಲ್ಪಿಸಿದರು.

**ಸೌಂಡ್ ಎಂಜಿನಿಯರಿಂಗ್ ನಡುವೆಯೂ ರಂಗ ಚಟುವಟಿಕೆ**

ಪಾಳಿಟೆಕ್ನಿಕ್‌ನಲ್ಲಿ ಹಾಗೂ ಸುಬ್ಬಣ್ಣನವರು ಕೌಟುಂಬಿಕ ವರ್ಗದಲ್ಲಿ, ನಟನೆ ಹಾಗೂ ನಾಟಕಗಳಲ್ಲಿ ಕೇವಲ ಅಭಿರುಚಿಯೇ ಅಲ್ಲದೆ ಪ್ರತಿಭಾವಂತರೂ ಆದ ಕೆಲವು ವಿದ್ಯಾರ್ಥಿಗಳಿದ್ದರು. ಪ್ರಥಮವಾಗಿ ಪಾರ್ಥರವರ ತಮ್ಮ ಗುರು, ಜಿ.ಪಿ.ರಾಜರತ್ನಂರವರ ಶಿಷ್ಯ. ಇವರು ಸುಬ್ಬಣ್ಣನಿಗೆ ಮಂಡೋದರಿ ನಾಟಕದ ರಾವಣನ ಪಾತ್ರವನ್ನು, ಪಾಲಿಟೆಕ್ನಿಕ್‌ನ ಏಕಪಾತ್ರಾಭಿನಯ ಸ್ಪರ್ಧೆಯಲ್ಲಿ ಭಾಗವಹಿಸಲು ಕಲಿಸಿದ್ದರು. ಚಲನಚಿತ್ರರಂಗ ಖ್ಯಾತಿಯ ಗೋವಿಂದ್ ನಿಹಲಾನಿ ಇವರ ಜೂನಿಯರ್. ಮತ್ತೊಬ್ಬ ಸಹ ವಿದ್ಯಾರ್ಥಿ ನಾರಾಯಣಸ್ವಾಮಿ (ಚಲನಚಿತ್ರ ಖ್ಯಾತಿ ಶ್ರೀನಾಥ್)ಗೆ ಸುಬ್ಬಣ್ಣನವರು 'ಶೂದ್ರ ತಪಸ್ವಿ' ನಾಟಕಕ್ಕೆ ಮೇಕಪ್ ಮಾಡಿದ್ದರು. ಮತ್ತೊಬ್ಬ ವಿದ್ಯಾರ್ಥಿ ಮಾಧವರಾವ್ ಸಿನೆಮಟೋಗ್ರಫಿ ವಿಭಾಗದಲ್ಲಿದ್ದರು. ರಂಗಭೂಮಿಯಲ್ಲಿ ಆಸಕ್ತಿಯಿದ್ದ ಎಲ್ಲಾ ವಿದ್ಯಾರ್ಥಿಗಳೊಡನೆ ಸಹಕರಿಸಿ ಪ್ರತಿ ವರ್ಷವೂ ಪಾಲಿಟೆಕ್ನಿಕ್ ವತಿಯಿಂದ ಉಲ್ಲಾಳ್ ಶೀಲ್ಡ್ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿದರು. 'ಸುಂದ್ರೋಪ ಸುಂದ್ರು' ನಾಟಕವನ್ನು ಸುಬ್ಬಣ್ಣ ಪ್ರಾಯೋಜಿಸಿದ್ದು ಇದೇ ನಾಟಕ ಸ್ಪರ್ಧೆಗೆ.

ಕೆ.ಆರ್.ನಗರದಲ್ಲಿ ಪ್ರಾರಂಭಿಸಿದ ರೇಖಾ ಚಿತ್ರ ಕಲೆ ಮತ್ತು ಯಾವುದೇ ವಸ್ತುವನ್ನೇ ಆದರೂ (ಕಾಗದ, ಥರ್ಮೋಕೋಲ್ ಮುಂತಾದುವುಗಳಿಂದ) ಉಪಯೋಗಿಸಿ ಮಾಡೆಲ್ಲುಗಳನ್ನು ತಯಾರಿಸುವುದು ಮತ್ತು ಇವುಗಳನ್ನು ನಾಟಕಗಳಿಗೆ ಸಂದರ್ಭೋಚಿತವಾಗಿ ಉಪಯೋಗಿಸುವುದನ್ನು ಸುಬ್ಬಣ್ಣನವರು ಮೈಸೂರಿನಲ್ಲೂ ಮುಂದುವರೆಸಿದರಲ್ಲದೆ ತಮ್ಮ ಸಹ ನಟರುಗಳಿಗೆ ಅಗತ್ಯವಿದ್ದ ವೇಷ ಭೂಷಣಗಳ ಅಳವಡಿಕೆ ಹಾಗೂ ರಂಗಸ್ಥಳದ ವಿನ್ಯಾಸ ಮತ್ತು ಬೆಳಕು ನಿರ್ವಹಣೆಯನ್ನೂ ತಾವೇ ನಿರ್ವಹಿಸುತ್ತಿದ್ದರು. ಈ ವಿಭಾಗಗಳಲ್ಲಿ ರಂಗಕರ್ಮಿಗಳ ಕಾರ್ಯ ನಿರ್ವಹಣೆಯನ್ನು ಸೂಕ್ಷ್ಮವಾಗಿ ಗಮನಿಸುವುದು. ಸಂದರ್ಭೋಚಿತವಾಗಿ ಅನುಭವಶಾಲಿಗಳೊಡನೆ ಚರ್ಚಿಸುವುದು ಮತ್ತು ಅವಕಾಶ ಸಿಕ್ಕಿದಾಗಲೆಲ್ಲಾ, ಈ ವಿಷಯಗಳ ಬಗ್ಗೆ ಬಂದಿರುವ ಲೇಖನಗಳನ್ನು ಓದುವುದು ಹಾಗೂ ಪ್ರತಿ ವಿಭಾಗದ ಬಗೆಗೂ ತೀವ್ರವಾಗಿ ಆಲೋಚನೆಯನ್ನು ಮಾಡುವುದರ ಮೂಲಕ ಇವರು ತಮ್ಮ ಕಾರ್ಯಕ್ಷಮತೆಯನ್ನು ದಿನದಿನಕ್ಕೂ ಹೆಚ್ಚಿಸಿಕೊಳ್ಳುತ್ತಲೇ ಬಂದಿದ್ದರು. ಅಂತೆಯೇ ಪಾಲಿಟೆಕ್ನಿಕ್ ವತಿಯಿಂದ ಪ್ರಾಯೋಜಿಸುತ್ತಿದ್ದ ನಾಟಕಗಳು ಉತ್ತಮ ಗುಣಮಟ್ಟದಿಂದ ಹೊರಹೊಮ್ಮಿ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಆಯೋಜಿಸುತ್ತಿದ್ದ ಷಣ್ಮುಗಮ್ ಶೀಲ್ಡ್‌ಗೆ ಸುಬ್ಬಣ್ಣ ಪ್ರಾಯೋಜಿಸಿದ 'ಸುಂದ್ರೋಪಸುಂದ್ರು' ನಾಟಕಕ್ಕೆ ಬಹುಮಾನವೂ ಸಂದಿತು. ಕಾಕತಾಳೀಯವೆಂಬಂತೆ ಮುಂದೆ ಇವರ ಅಚ್ಚುಮೆಚ್ಚಿನ ಗೆಳೆಯರಾದ ವಿ.ರಾಮಮೂರ್ತಿಯವರು ಈ ಸ್ಪರ್ಧೆಯಲ್ಲಿ ತೀರ್ಪುಗಾರರಲ್ಲಿ ಒಬ್ಬರಾಗಿದ್ದರು.

**ಡಿಪ್ಲೊಮಾ ಗಳಿಕೆ**

ನಾಟಕ, ವ್ಯಾಸಂಗಗಳ ಮಧ್ಯೆಯೂ ಸುಬ್ಬಣ್ಣನ ಹುಡುಗಾಟಿಕೆಗೆ ಕೊರತೆಯಿರಲಿಲ್ಲ. ಅಧ್ಯಾಪಕರಲ್ಲಿ ಒಬ್ಬರಾದ ನಾರಾಯಣಸ್ವಾಮಿಯವರು ವರ್ಕ್‌ಶಾಪ್ ಮುಖ್ಯಸ್ಥರಾಗಿದ್ದಾಗ ಸೌಂಡ್ ಮತ್ತು ಫಿಲ್ಮ್ಸ್ ವಿಭಾಗದವರಿಗೆ ಒಂದು ಕಾರ್ಯಾಗಾರವನ್ನು ಆಯೋಜಿಸಿದ್ದರು. ಆಲ್ ಫೂಲ್ಸ್ ಡೇಯಾದ ಏಪ್ರಿಲ್ ೧ ರಂದು. ಹಾಸ್ಯಕ್ಕೋಸ್ಕರ, 'ಕಾರ್ಯಾಗಾರರದ್ದಾಗಿದೆ' ಎಂದು ಒಂದು ತಿಳುವಳಿಕೆ ಪತ್ರವನ್ನು ಟೈಪ್ ಮಾಡಿಸಿ, ಯಾರದ್ದೋ ಸಹಿ ಎಂಬಂತೆ ತೋರಿಸಿ ನೋಟೀಸ್ ಬೋರ್ಡ್ ಮೇಲೆ ಅಂಟಿಸಿಬಿಟ್ಟಿದ್ದರು. ಬಂದ ವಿದ್ಯಾರ್ಥಿಗಳೆಲ್ಲಾ ಸಂತೋಷಭರಿತರಾಗಿ ವಾಪಸ್ ಹೋದ ಮೇಲೆ ಬಂದ ಆಯೋಜಿತರಿಗೆ ದಿಕ್ಕುತೋಚದಾಗಿ, ದಿಟವಾಗಿಯೂ ಕಾರ್ಯಾಗಾರವನ್ನು ರದ್ದುಪಡಿಸಲೇಬೇಕಾಗಿ ಬಂದಿತು. ದೂರು ಪ್ರಿನ್ಸಿಪಾಲ್‌ರವರೆಗೂ ಹೋಯಿತು. ಮಾರನೆಯ ದಿನದಿಂದ ಪ್ರಾಯೋಜಿತರು ಎಷ್ಟು ಬಾರಿ ಪ್ರಯತ್ನಿಸಿದರೂ ಈ ಕೆಲಸ ಯಾರದೆಂಬ ಗುಟ್ಟನ್ನು ವಿದ್ಯಾರ್ಥಿಗಳು ಬಿಟ್ಟು ಕೊಡಲಿಲ್ಲ. ಇದೇ ರೀತಿ, ಎಂಜಿನಿಯರಿಂಗ್ ಮೆಕ್ಯಾನಿಕ್ಸ್ ಮಾಡುತ್ತಿದ್ದ ಹೊಸದಾಗಿ ಬಂದಿದ್ದ ಉಪಾಧ್ಯಾಯರೊಬ್ಬರು ಹಾಜರಾತಿ ಪುಸ್ತಕದಲ್ಲಿ ಅವರವರೆ ತಮ್ಮ ಹೆಸರುಗಳನ್ನು ಬರೆಯಬೇಕೆಂದು ವಿದ್ಯಾರ್ಥಿಗಳಿಗೆ ಹೇಳಿದ್ದರು. ಕುಚೋದ್ಯಕ್ಕೆ ಕಾಲ್ಪನಿಕ ಹೆಸರುಗಳಾಗಿ ತಿರುವೆಂಗಡಮ್, ಅಮ್ಮಯಪ್ಪನ್ ಅಂತೆಯೇ ರಾಜಾ ಸುಲೋಚನ ಎಂಬ ಹೆಸರನ್ನೂ ಸೇರಿಸಿಬಿಟ್ಟಿದ್ದರಂತೆ. ಪ್ರತಿ ಹೆಸರಿಗೂ "ಪ್ರೆಸೆಂಟ್ ಸರ್' ಸಿಗುತ್ತಿದ್ದು ರಾಜಾ ಸುಲೋಚನಾಗೆ ಮಾತ್ರ ಯಾವ ಪ್ರತಿಕ್ರಿಯೆಯೂ ಬರದಿದ್ದರೂ ಅವರೂ ವಿದ್ಯಾರ್ಥಿಗಳ ಜೊತೆ ಹಾಸ್ಯವನ್ನು ಹಂಚಿಕೊಂಡಿದ್ದರಂತೆ. ವಿದ್ಯಾರ್ಥಿ ಸಂಘಕ್ಕೆ ಚುನಾವಣೆ ನಡೆದಾಗ ಬೇರೆಯವರು ನೃತ್ಯ, ಹಾಡು, ತಮ್ಮಟೆ ಇತ್ಯಾದಿಗಳನ್ನು ಮಾಡುತ್ತಿದ್ದರು. ಆದರೆ ಸುಬ್ಬಣ್ಣ ಒಂದು ಕಾರ್ಡ್‌ಬೋರ್ಡ್ ಬಾಕ್ಸ್‌ನಲ್ಲಿ ತಮ್ಮ ದೇಹವನ್ನು ಸಂಪೂರ್ಣವಾಗಿ ಅಳವಡಿಸಿ, ಕೈಕಾಲುಗಳು ಮಾತ್ರ ರಂಧ್ರಗಳಿಗೆ ಹೊರಬಂದು, ಕಣ್ಣುಗಳು ಮಾತ್ರ ಕಾಣುವಂತೆ

ರಂಧ್ರವನ್ನು ಕೊರೆದು ಮೆರವಣಿಗೆಯುದ್ದಕ್ಕೂ ತಮ್ಮ ದೇಹವನ್ನು ಎಡ ಮತ್ತು ಬಲಬದಿಗೆ ಬಾರಿ ಬಾರಿಗೂ ೧೫೦ ಡಿಗ್ರಿ ಕೋನದಷ್ಟು ತಿರುಗಿಸಿ ಹಾಡಿಗೆ ತಕ್ಕಂತೆ ಕುಣಿಯುತ್ತಿದ್ದಂತೆ.

ಹೊರ ನೋಟಕ್ಕೆ ಸೌಂಡ್ ಎಂಜಿನಿಯರಿಂಗ್ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದರೂ ವಿಷಯೇತರ ಚಟುವಟಿಕೆಗಳಲ್ಲಿ - ಅದರಲ್ಲಿಯೂ 'ಲಲಿತ ಕಲಾ ವಿಭಾಗದಲ್ಲಿಯೇ ಹೆಚ್ಚು ಆಸಕ್ತಿ ತೋರಿಸುತ್ತಿದ್ದಂತೆ ಅನ್ನಿಸಿದರೂ ವಾಸ್ತವದಲ್ಲಿ ಅವರ ಆಯ್ಕೆಯ ವಿಭಾಗದಲ್ಲಿಯೂ ಸುಬ್ಬಣ್ಣನವರಿಗೆ ಹೆಚ್ಚು ಆಸ್ಥೆಯಿದ್ದುದರಿಂದ ಅವರು ತಮ್ಮ ವಿಭಾಗದಲ್ಲಿ ೨ನೇ ರ್‍ಯಾಂಕ್ ಪಡೆದು ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಆದರೂ ಎಂದಾದರೊಮ್ಮೆ ಪದವೀಧರನಾಗಲೇಬೇಕೆಂದು ಅವರು ಕೆಲಸಕ್ಕೆ ಸೇರಿದ ಮೇಲೆಯೂ ಮೈಸೂರಿನ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಎಮ್.ಎ. (ಸೋಷಿಯಾಲಜಿ)ಗೆ ನೋಂದಣಿ ಮಾಡಿಕೊಂಡು, ಒಂದು ಕಾರಣದಿಂದ ಪರೀಕ್ಷೆ ಬರೆಯಲಾಗದೆ, ನಂತರ ಎಮ್.ಎ. (ಇಂಗ್ಲಿಷ್)ಗೆ ನೋಂದಣಿ ಮಾಡಿಕೊಂಡರು. ಬದಲಾಯಿಸದ ವಿಷಯದಲ್ಲೂ, ಮತ್ತೊಂದು ಕಾರಣದಿಂದ ಪರೀಕ್ಷೆ ಬರೆಯಲಾಗದೆ ಸುಬ್ಬಣ್ಣನವರ ಆಸೆ ಕೊನೆಗೂ ನೆರವೇರಲಿಲ್ಲ. ಮುಂದೆ ಹಲವಾರು ವರ್ಷ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿಷಯ ತಜ್ಞರಾಗಿ ಸ್ನಾತಕೋತ್ತರ ತರಗತಿಗಳಿಗೆ ಗೌರವ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ ತೃಪ್ತಿ ಅವರಿಗಿದೆ.

**ರಕ್ಷಣಾ ಇಲಾಖೆಯಲ್ಲಿ ನೌಕರಿ**

ಡಿಪ್ಲೋಮಾ ಪಡೆದ ೩-೪ ತಿಂಗಳುಗಳಲ್ಲೇ ಸುಬ್ಬಣ್ಣನವರು, ಹಿಂದೂಸ್ಥಾನ ವಿಮಾನ ಕಾರ್ಖಾನೆಯಲ್ಲಿ ಕೆಲವು ದಿವಸಗಳು 'ದಿನಗೂಲಿ' ಮೇಲೆ ಟೆಕ್ನೀಶಿಯನ್ ಆಗಿ ಕಾರ್ಯ ನಿರ್ವಹಿಸಿ, ೧೪ನೇ ಡಿಸೆಂಬರ್ ೧೯೬೧ರಂದು ರಕ್ಷಣಾ ಇಲಾಖೆಯ ಸಂಶೋಧನೆ ಮತ್ತು ವಿಕಾಸದ ಎಲೆಕ್ಟ್ರಾನಿಕ್ಸ್ ವಿಭಾಗವಾದ ಎಲ್.ಆರ್.ಡಿ.ಇ. ಸೇರಿದರು. ಆ ದಿನಗಳಲ್ಲಿ ಎಲ್.ಆರ್.ಡಿ.ಇ. ಸಂಶೋಧನೆಗೆ ಎಷ್ಟು ಪ್ರಾಧಾನ್ಯತೆಯನ್ನು ಕೊಡುತ್ತಿದ್ದಿತೋ ಅಷ್ಟೇ ಪ್ರಾಧಾನ್ಯತೆಯನ್ನು ಲಲಿತ ಕಲೆಗೂ ಮೀಸಲಿಟ್ಟಿದ್ದಿತು. ಸಂಸ್ಥೆಯ ಮುಖ್ಯಸ್ಥ ಬ್ರಿಗೇಡಿಯರ್ ಬಿ.ಎಮ್.ಚಕ್ರವರ್ತಿ ದಿಟವಾದ ಕಲೋಪಾಸಕರು. ತಾಂತ್ರಿಕ ವಿಷಯಗಳಲ್ಲಿ ಅವರು ಹೇಗೆ ಹೊಸತರ ಅನ್ವೇಷಣೆಯಲ್ಲಿದ್ದರೋ ಅದೇ ರೀತಿಯಲ್ಲಿಯೇ ಉತ್ತಮ ಪರಿಣಾಮಕ್ಕಾಗಿ ಕಲೆ ಮತ್ತು ತಾಂತ್ರಿಕತೆಯ ಸಮ್ಮಿಳಿತವನ್ನೂ ಬಯಸುತ್ತಿದ್ದರು. ಅವರ ಬಯಕೆಯ ಸಾಕಾರಕ್ಕಾಗಿ ಸಹಕರಿಸುತ್ತಿದ್ದವರು ಲಲಿತ ಕಲಾ ಸಂಘದ ಮುಖ್ಯಸ್ಥ. ವಿಜ್ಞಾನಿ ಪಿ.ಎನ್.ದಾಸ್, ತಾಂತ್ರಿಕ ವಿಭಾಗದಲ್ಲಿ ಯಂತ್ರಗಳ ಬಗೆಗೆ ಪರಿಣಿತಿ ಹೊಂದಿದ್ದ ಸರ್ದೂಲ್ ಸಿಂಗ್. ಬೆಳಕು ವಿಭಾಗದಲ್ಲಿ ವಾಸುದೇವಮೂರ್ತಿ ಹಾಗೂ ಧ್ವನಿಯಲ್ಲಿ ನೈಪುಣ್ಯತೆ ಹೊಂದಿದ್ದ ವೆಂಕಿ (ವೆಂಕಟರಾಮನ್) ಅಂತೆಯೇ ಆ ದಿನಗಳಲ್ಲಿ ಎಲ್.ಆರ್.ಡಿ.ಇ. ಪ್ರಾಯೋಜಿಸುತ್ತಿದ್ದ ಹಾಗೂ ಅವರ ರಂಗ ವಿನ್ಯಾಸ, ಬೆಳಕು ಮತ್ತು ಧ್ವನಿ ಬಹಳ ಪ್ರಸಿದ್ಧಿಯನ್ನು ಪಡೆದುಕೊಂಡಿದ್ದಿತು. ತಾಂತ್ರಿಕ ಹಾಗೂ ಕಲಾ ನೈಪುಣ್ಯತೆಯನ್ನೊಳಗೊಂಡ ಎಲ್.ಆರ್.ಡಿ.ಇ ಲಲಿತ ಕಲಾ ಸಂಘದ ಉತ್ತಮ ಕೊಡುಗೆಗಳು - ಒನ್ ಫುಲ್ ಮೂನ್ ನೈಟ್. ಕಾಸ್ಟ್ಯೂಮ್ ಆಫ್ ಇಂಡಿಯಾ, ಪ್ಯಾಂಟೊಮೈಮ್ ಮತ್ತು ರವೀಂದ್ರನಾಥ ಠಾಗೂರರ 'ನಟೀರ್ ಪೂಜ' ಆಧಾರಿತ, ಪೂಜಾರಿಣಿ.

ಎಲ್.ಆರ್.ಡಿ.ಇ. ಸಂಗೀತ ತಂಡ ಉತ್ತಮ ಹಿಂದಿ ಮತ್ತು ಉರ್ದು ಸಂಗೀತವನ್ನು ಪ್ರಸ್ತುತ ಪಡಿಸುತ್ತಿತ್ತಾದರೂ ಖವಾಲಿ ತಂಡ ವೈಶಿಷ್ಟ್ಯ ಎಚ್.ಕೆ.ಪಹುವಾ (ಪಂಜಾಬಿ) ಮತ್ತು ಚಟರ್ಜಿ ತಂಡದ ನಾಯಕರು. ತಂಡದಲ್ಲಿ ಕೊಳಲು ನುಡಿಸುತ್ತಿದ್ದವರು ಕರ್ನಾಟಕ ಸುಗಮ ಸಂಗೀತದ ದಿಗ್ಗಜ ಮೈಸೂರು ಅನಂತಸ್ವಾಮಿ, ನಾಟಕದಲ್ಲಿ ಪಾಲ್ಗೊಳ್ಳುತ್ತಿದ್ದವರು ನ್ಯಾಷನಲ್ ಕಾಲೇಜಿನ ಹಳೇ ವಿದ್ಯಾರ್ಥಿಗಳಾದ ದಾನಿ (ಕನ್ನಡ ರಂಗಭೂಮಿಯ ಮೇಕ್‌ಅಪ್ ತಜ್ಞರು). ಕೆ.ಸಿ.ಶೇಖರ್, ಭುಜಂಗರಾವ್, ಶೇಷಾದ್ರಿ ಮತ್ತಿತರರು. ಈ ಎಲ್ಲ ಕನ್ನಡಿಗರ ಒತ್ತಡದಿಂದಲೇ, ಸಂಗೀತ ತಂಡ ಪ್ರತಿಯೊಂದು ಕಾರ್ಯಕ್ರಮದಲ್ಲೂ, ಕನಿಷ್ಠ ೧-೨ ಕನ್ನಡ ಸುಗಮ ಸಂಗೀತವನ್ನೂ ಪ್ರಸ್ತುತಪಡಿಸುತ್ತಿದ್ದಿತು. ಸುಬ್ಬಣ್ಣನವರು, ಸರ್ದೂಲ್ ಸಿಂಗ್ ಮತ್ತು ಎ.ಎನ್.ವೆಂಕಟರಾಮನ್ (ವೆಂಕಿ)ರವರ ನೇತೃತ್ವದಲ್ಲಿ ತಮಗೆ ದೊರೆತ ಪ್ರಾವೀಣ್ಯತೆಯನ್ನು ಈಗಲೂ ಕೃತಜ್ಞತೆಯಿಂದ ನೆನೆಯುತ್ತಾರೆ. ಎಲ್.ಆರ್.ಡಿ.ಇ. ಕನ್ನಡ ತಂಡದಿಂದ ಕೈಲಾಸಂರವರ 'ನಂ ಕ್ಲಬ್ಬು' ಒಂದು ಉತ್ತಮ ಪ್ರದರ್ಶನವಾಗಿದ್ದಿತು. ಈ ತಂಡ ವರ್ಷಕ್ಕೆ ೩-೪ ಬಾರಿ ಬೆಂಗಳೂರು ಆಕಾಶವಾಣಿಯವರು ಪ್ರಸಾರ ಮಾಡುತ್ತಿದ್ದ ಕಾರ್ಮಿಕರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಿರು ನಾಟಕಗಳನ್ನು ಮತ್ತು ಸಂಗೀತ ರೂಪಕಗಳನ್ನು ನಡೆಸಿಕೊಡುತ್ತಿದ್ದರು. ಕೆಲವೊಮ್ಮೆ ಸುಬ್ಬಣ್ಣನವರ ಈ ಕಿರು ನಾಟಕಗಳನ್ನು ಬರೆದು ನಿರ್ದೇಶಿಸಿ ನೆರವೇರಿಸಿಕೊಡುತ್ತಿದ್ದರು.

**ಬೆಂಗಳೂರು ರಂಗಭೂಮಿಗೆ ಸುಬ್ಬಣ್ಣನವರ ಪರಿಚಯ**

ಪಾಲಿಟೆಕ್ನಿಕ್‌ನಲ್ಲಿನ ವ್ಯಾಸಂಗದ ದಿನಗಳಲ್ಲೇ ರಂಗ ಸಜ್ಜಿಕೆ, ಮೇಕ್‌ಅಪ್, ಉಡುಗೆ-ತೊಡುಗೆ, ಬೆಳಕು ಮತ್ತು ಧ್ವನಿ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಸುಬ್ಬಣ್ಣನವರು ಎಲ್.ಆರ್.ಡಿ.ಇ. ಸೇರಿದ ನಂತರ ಕಲಾ ವಿಲಾಸೀ ತಂಡಗಳಿಗೂ ತಮ್ಮ ಸೇವೆಯನ್ನು ನೀಡಲು ಪ್ರಾರಂಭಿಸಿದರು. ಮಲ್ಲೇಶ್ವರಂ ವಿಮೆನ್ ಎಂಟಪ್ರೀನರ್ಸ್ ಸೊಸೈಟಿಗೆ ಕೈಲಾಸಂರವರ 'ವೈದ್ಯನ ವ್ಯಾಧಿ' ನಾಟಕವನ್ನು ನಿರ್ದೇಶಿಸಿದಾಗ ತಾಂಡಿ (ತಾಂಡವೇಶ್ವರ್) ಮತ್ತು ಬುಟ್ಟಿ (ನಾಗರತ್ನ ರಾವ್)ಯವರುಗಳ ಪರಿಚಯವಾಯಿತು. ಅಂತೆಯೇ ಬ್ಯಾಂಗಲೋರ್ ಲಿಟ್ಲ್‌ಥಿಯೇಟರ್ ತಂಡಕ್ಕೆ ಬಿ.ಎನ್.ನಾರಾಯಣ್ (ಮೇಕ್‌ಅಪ್ ನಾಣಿ) ಮೂಲಕ ಪರಿಚಯವಾಗಿ ಅಲ್ಲಿಯೇ ಡಾ.ಎಮ್.ಎನ್.ಶ್ರೀನಿವಾಸ್ ಮತ್ತು ಜಗಳೂರಿನ ಇಮಾಮ್‌ರ ಪರಿಚಯವೂ ಆಯಿತು. ಸುಬ್ಬಣ್ಣ ಈ ತಂಡಕ್ಕೆ ಬೆಳಕು ವಿನ್ಯಾಸವನ್ನು ಕೈಗೊಳ್ಳಲು ಪ್ರಾರಂಭಿಸಿದರು. ಈ ಎಲ್ಲ ರಂಗಾಸಕ್ತರ ಪರಿಚಯದ ಮೂಲಕ ಅವರು ನಾಟ್ಯ ಸಂಘದ ಬೆಂಗಳೂರು ಶಾಖೆಯ ಸದಸ್ಯರೂ ಆದರು.

ಯಾವುದೇ ಸಂಘಕ್ಕೆ ಸುಬ್ಬಣ್ಣನವರು ಸದಸ್ಯರಾದರೂ ತಕ್ಷಣವೆ ಕ್ರಿಯಾತ್ಮಕ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಿಬಿಡುತ್ತಿದ್ದರು. ಅಂತೆಯೇ ಅವರು ನಾಟ್ಯ ಸಂಘದ ಎಲ್ಲಾ ಚಟುವಟಿಕೆಗಳಲ್ಲೂ ಭಾಗವಹಿಸುತ್ತಿದ್ದರು. ೧೯೭೫ರಲ್ಲಿ ನಾಟ್ಯ ಸಂಘದಿಂದ ಹೊರಬಂದನಂತರ, ನಾಟ್ಯ ಸಂಘದ ಆಲ್ ಇಂಡಿಯಾ ಥಿಯೇಟರ್ ಫೆಸ್ಟಿವಲ್ ಆದಾಗ, ದೇಶಮುಖರವರ 'ಶೇಕ್ಸಪಿಯರ್‌ಸ್ ಇನ್ಫ್ಲುಯೆನ್ಸ್ ಆನ್ ಇಂಡಿಯನ್ ಥಿಯೇಟರ್'ನಿಂದ ಸ್ಫೂರ್ತಿಗೊಂಡು, ಕನ್ನಡ ಸಂಸ್ಕೃತಿಯ ಪರವಾಗಿ 'ರಂಗ ಮಂಚವನ್ನು ಪ್ರಾರಂಭಿಸಿದರು. ಸುಬ್ಬಣ್ಣ ಹಡಪದ್‌ರವರ ಆರ್ಟ್ ಡೈರೆಕ್ಷನ್‌ಗೆ ಸಹಾಯಕರಾಗಿ, ಎಮ್.ಬಿ.ಎಸ್.ಪ್ರಸಾದ್‌ರವರ ಡೈರೆಕ್ಷನ್‌ಗೆ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಮತ್ತು ಪೈಲಟ್ ರೆಕಾರ್ಡಿಂಗ್‌ಗೆ ಸ್ವತಂತ್ರವಾಗಿ ಕೆಲಸ ಮಾಡಿದರು. ಮಯೂರ ಫಿಲ್ಮ ಸೊಸೈಟಿ ಸ್ಥಾಪಕ ಸದಸ್ಯನಾಗಿ, ನಂತರ

ಎಮ್.ವಿ.ಕೃಷ್ಣಸ್ವಾಮಿಯವರು ಪ್ರೋತ್ಸಾಹಿಸಿದ ಮಯೂರ ಫಿಲ್ಮ್ ಪ್ರೈವೇಟ್ ಲಿಮಿಟೆಡ್‌ನಲ್ಲೂ ಪ್ರಾಥಮಿಕ ಸದಸ್ಯತ್ವವನ್ನು ಹೊಂದಿದ್ದರು. ಇಲ್ಲಿ ಸುಬ್ಬಣ್ಣನಿಗೆ ಎಮ್.ವಿ.ಕೆ.ಯವರೇ ಶ್ರೀರಕ್ಷೆಯಾಗಿದ್ದರು.

ಡಾ.ಎಚ್.ಎಸ್.ಎನ್.ರಾಯ್‌ರವರು ಹ್ಯಾನಿಮೇನಿಯನ್ ಕಾಲೇಜ್ ಆಫ್ ಹೊಮಿಯೋಪಥಿಕ್ ಮೆಡಿಸಿನ್‌ನ ಪ್ರಾಂಶುಪಾಲರಾಗಿದ್ದಾಗ, ಬೆಂಗಳೂರು ನಾಗೇಶ್ ಸುಬ್ಬಣ್ಣನವರನ್ನು, ಒಮ್ಮೆ ಅಲ್ಲಿ ಹಮ್ಮಿಕೊಂಡಿದ್ದ ಕನ್ನಡ ನಾಟಕದಲ್ಲಿ ಕಲಾವಿದರುಗಳಿಗೆ ಮೇಕ್‌ಅಪ್ ಮಾಡಲು ಕರೆದುಕೊಂಡು ಹೋಗಿದ್ದರು. ಅಲ್ಲಿ ಸುಬ್ಬಣ್ಣನವರಿಗೆ ಮುಂದೆ ಅವರ ಬಾಳ ಸಂಗಾತಿಯಾದ ಶಾರದ ಪರಿಚಯವಾದರು. ಶಾರದಾ ರಂಗ ಕಲಾವಿದೆ. ಅವರು ಮಲ್ಲೇಶ್ವರಂ ವಿಮೆನ್ ಎಂಟಪ್ರ್ರೀನರ್ಸ್ ಸೊಸೈಟಿಯಲ್ಲೂ ಸದಸ್ಯೆಯಾಗಿದ್ದರು. ಅವರು ನಾಟಕ ವಿಭಾಗದಲ್ಲಿ, ಟೀಚರ್ಸ್ ಟ್ರೇನಿಂಗ್ ಅವಧಿಯಲ್ಲಿ ಸಂತನ ಮಗ ಮತ್ತು ಶ್ರೀರಂಗರ ಸಂಪದ್ಧರ್ಮ ನಾಟಕಗಳಲ್ಲಿ ಅಭಿನಯಿಸಿದ್ದರು. ವಾತ್ಸಲ್ಯ ಪಥ ಮತ್ತು ಕಂಕಣ ಚಿತ್ರಗಳಲ್ಲೂ ಅಭಿನಯಿಸಿದ್ದರು. ಕಾಲೇಜು ಜೀವನದ ನಂತರ ಹೋಮಿಯೋಪತಿ ವಿಭಾಗದ ವೈದ್ಯಕೀಯ ವೃತ್ತಿಗೆ ಸೇರಿದ ಮೇಲೆ ವೇಳೆಯ ಅಭಾವದಿಂದ ರಂಗ ಚಟುವಟಿಕೆಗಳನ್ನು ಕ್ರಮೇಣವಾಗಿ ಕಡಿಮೆ ಮಾಡಿಕೊಂಡು ಕಾಲಾನುಕ್ರಮಣ ಕೇವಲ ಅಭಿಮಾನವನ್ನಷ್ಟೇ ಹೊಂದಿದ್ದಾರೆನ್ನಬಹುದು. ರಂಗಭೂಮಿಗೆ ಇದು ನಷ್ಟವಾದರೂ, ರೋಗಿಗಳಿಗೆ -ತತ್ರಾಪಿ ಬಡರೋಗಿಗಳಿಗೆ- ವರವಾಯಿತೆಂದೇ ಹೇಳಬೇಕು. ಸುಬ್ಬಣ್ಣ ಶಾರದರು ಕಾಲೇಜ್ ಪರಿಚಯದಲ್ಲೇ ಪರಸ್ಪರ ಇಷ್ಟಪಟ್ಟರಾದರೂ, ಸುಬ್ಬಣ್ಣನವರು ತಮ್ಮ ವಿವಾಹ ಲವ್ ಮ್ಯಾರೇಜ್ ಅಲ್ಲ, ಅದು ಅರೇಂಜ್ಡ್ ಮ್ಯಾರೇಜ್ ಎಂದು ಹೇಳುತ್ತಾರೆ. ಅದಕ್ಕೆ ಪೂರಕವಾಗಿ ಪರಸ್ಪರ ಒಪ್ಪಿಗೆಯಾದರೂ ಶಾರದ ಅವರ ಅಕ್ಕಂದಿರ ವಿವಾಹವಾಗುವವರೆವಿಗೂ, ಸುಮಾರು ೬-೭ ವರ್ಷಗಳು ಕಾದಿದ್ದು, ನಂತರವಷ್ಟೇ ೧೯೬೯ರಲ್ಲಿ ಈ ದಂಪತಿಗಳ ವಿವಾಹವಾಗಿದ್ದು, ಸುಬ್ಬಣ್ಣನವರು, ಶಾರದನವರನ್ನು ಊರಿಗೆ ಕರೆದುಕೊಂಡು ಹೋಗಿ ಎಲ್ಲವನ್ನೂ ಪರಿಚಯಿಸಿದ್ದರೂ, ವಿವಾಹವಾಗುವ ಬಯಕೆಯನ್ನು ಮಾತ್ರ ಗುಟ್ಟಾಗಿ ಇಟ್ಟಿದ್ದರು. ವಿವಾಹದ ಸಮಯ ಬಂದು ಅವರಿಗೆ ಈ ವಿಷಯ ತಿಳಿಸಿದಾಗ, ತಂದೆ ತಾಯಿಯರ ಅನುಮತಿ ದೊರೆಯಲಿಲ್ಲ. ಕೆಲವರು ಸಂಬಂಧಿಕರು ಮಾತ್ರ ಮದುವೆಗೆ ಬಂದಿದ್ದರು. ಆಗಾಗ್ಯೆ ಮಡದಿ, ಮಕ್ಕಳ ಜೊತೆ ಇವರು ಊರಿಗೆ ಹೋಗಿದ್ದಾರಾದರೂ, ಭಾವನಾತ್ಮಕ ಸಂಬಂಧ ಬೆಳೆದದ್ದು ಸುಮಾರು ೧೦ ವರ್ಷಗಳ ನಂತರವೇ.

ಎಲ್.ಆರ್.ಡಿ.ಇಲ್ಲಿನ ತಾಂತ್ರಿಕ ನೈಪುಣ್ಯತೆ, ಬಿ.ಎಲ್.ಟಿ. ಒಡನಾಟ ಹಾಗೂ ಅನೇಕ ಪ್ರತಿಭಾವಂತ ನಟರೂ ಮತ್ತು ರಂಗತಜ್ಞರ ಸಹವಾಸದಿಂದ ಸುಬ್ಬಣ್ಣನವರು ಸ್ವತಃ ರಂಗಭೂಮಿಯಿಂದ ನೈಪುಣ್ಯತೆಯನ್ನು ಪಡೆದು ಅದನ್ನು ಇತರರಿಗೆ ವಿತರಿಸಿ ಕನ್ನಡ ರಂಗಭೂಮಿಯನ್ನೂ ಶ್ರೀಮಂತವಾಗಿಸಿದ್ದಾರೆನ್ನಬಹುದು. ಇವರು ರಂಗಭೂಮಿಯಲ್ಲಿ ಕೈ ಆಡಿಸದ ವಿಭಾಗವಿಲ್ಲ. ಅವರನ್ನೇ ಇದರ ಬಗೆಗೆ ಕೇಳಿದಾಗ “I am jack of all....' ಎಂದು ಉತ್ತರಿಸುತ್ತಾರೆ. ಅವರು ವಾಕ್ಯವನ್ನು ಪೂರ್ಣಗೊಳಿಸುವ ಮೊದಲೇ ಪ್ರಶ್ನೆಯನ್ನು ಕೇಳಿದವರು, “ನೀವು ವಾಕ್ಯವನ್ನು ಪೂರ್ಣಗೊಳಿಸುವ ಅಗತ್ಯವಿಲ್ಲ. I know you are master of anything you deal with' ಎಂದು ಹೇಳುವ ಸ್ಥಿತಿಯಲ್ಲಿ ಇರುತ್ತಾರೆ.

## ರೇಖಾ ಚಿತ್ರ - ವರ್ಣ ಚಿತ್ರ

ಸುಬ್ಬಣ್ಣನವರು ಕೆ.ಆರ್.ನಗರದಿಂದಲೇ ಪ್ರಾರಂಭಿಸಿದ್ದ, ರೇಖಾಚಿತ್ರ-ವರ್ಣಚಿತ್ರ ಕಲೆಯನ್ನು ಅವರ ಜೀವನದುದ್ದಕ್ಕೂ, ಅದರಲ್ಲೂ, ರಂಗಭೂಮಿಗೋಸ್ಕರ ಹೇರಳವಾಗಿ ಉಪಯೋಗಿಸಿದ್ದಾರೆ. ೧೯೫೮ರಲ್ಲಿ ಒಮ್ಮೆ ವರಕವಿ ಬೇಂದ್ರೆ ಅವರು ಮೈಸೂರಿಗೆ ಬಂದಿದ್ದಾಗ ಶಾರದಾ ವಿಲಾಸ ಕಾಲೇಜಿನ ಕ್ಲಾಸ್ ರೂಮಿನಲ್ಲಿ ಅವರು ಕಾವ್ಯವಾಚನ ಮಾಡಿದ ನಂತರ ಸುಬ್ಬಣ್ಣನವರು, ಅವರಿಗೆ ತಾವು ಬಿಡಿಸಿದ್ದ ಬೇಂದ್ರೆಯವರ ರೇಖಾಚಿತ್ರವನ್ನು ತೋರಿಸಿದಾಗ ಬೇಂದ್ರೆಯವರು ಆ ಚಿತ್ರದ ಹಾಳೆಯ ಮೇಲೆಯೇ ಅವರ ಹಸ್ತಾಕ್ಷರವನ್ನು ಕರುಣಿಸಿದ್ದನ್ನು ಸುಬ್ಬಣ್ಣನವರು ತಮ್ಮ ಜೀವನದಲ್ಲೊಂದು ಅಮೃತ ಘಳಿಗೆಯೆಂದೇ ಭಾವಿಸಿದ್ದಾರೆ. ಸುಪ್ರಸಿದ್ಧ ನಾಟ್ಯಪಟುದ್ವಯರಾದ ಉದಯಶಂಕರ್ - ಅಮಲಾರವರ ಚಿತ್ರ ಬರೆದು ಆ ಚಿತ್ರದ ಮೇಲೆ ಆಟೋಗ್ರಾಫ್ ಕೇಳಿದಾಗ ಅವರುಗಳು ಸಂತೋಷದಿಂದ ತಮ್ಮ ಹಸ್ತಾಕ್ಷರವನ್ನು ದಯಪಾಲಿಸಿದ್ದರಂತೆ. ಅವರ ಪತ್ನಿ ಶಾರದ ಪ್ರಾಯೋಜಿಸಿದ ಗೋವಿನ ಹಾಡು ನಾಟಕಕ್ಕೆ ಹಲವು ಪೂರ್ಣ ಪ್ರಮಾಣದ ವರ್ಣದ ಮುಖವಾಡವನ್ನು ಸುಬ್ಬಣ್ಣ ತಯಾರಿಸಿದ್ದರು. 'ಕಲಾ ಘೋಷಿಣಿ', 'ಮಿತ್ರರ ಬಳಗ' "ಆಡಿಯೊ ಅಂಡ್ ಸಿಇ ಅಸೋಸಿಯೇಶನ್' ಮತ್ತು ಇತರ ಕೆಲವು ತಂಡಗಳಿಗೆ ಸಾಂಕೇತಿಕ ಚಿತ್ರಗಳನ್ನು ಲಾಂಛನವಾಗಿ ಉಪಯೋಗಿಸಲು ಅನುವು ಮಾಡಿಕೊಟ್ಟಿದ್ದಾರೆ. 'ಕಿತ್ತೂರ ರಾಣಿ ಚೆನ್ನಮ್ಮ' ಮತ್ತು 'ಹಂಪಿ' ಉತ್ಸವಗಳಲ್ಲಿ ಸುಬ್ಬಣ್ಣನವರ ಚಿತ್ರಗಳನ್ನು ಯಥೇಚ್ಛವಾಗಿ ಬಳಸಿಕೊಂಡಿದ್ದಾರೆ.

ಒಮ್ಮೆ ಅಮೆರಿಕದ ಮೋಶನ್ ಪಿಕ್ಚರ್ಸ್ ಅಸೋಸಿಯೇಷನ್ ಉಪಾಧ್ಯಕ್ಷರಾಗಿದ್ದ ಆಲ್ಬರ್ಟ್ ಜಾನ್ಸನ್, ಪಾಲಿಟೆಕ್ನಿಕ್‌ಗೆ ಭಾಷಣ ಕೊಡಲು ಬಂದಿದ್ದಾಗ ಅವರನ್ನು ಸ್ವಾಗತಿಸಲು ಕಪ್ಪು ಹಲಗೆಯ ಮೇಲೆ ಸ್ವಾಗತದ ನುಡಿಗಳನ್ನು ಬರೆದು ಅವರ ಸಹಿಯನ್ನೂ ಯಥಾವತ್ತಾಗಿ ಸುಬ್ಬಣ್ಣ ಬರೆದಿದ್ದರಂತೆ. ಜಾನ್ಸನ್‌ರು ತಮ್ಮ ಹಸ್ತಾಕ್ಷರದ ಪಡಿಯಚ್ಚನ್ನು ಕಂಡು ಆಶ್ಚರ್ಯ ಪ್ರಕಟಿಸಿ ಇದನ್ನು ಬರೆದ ಪ್ರತಿಭಾವಂತ ಯಾರೆಂದು ವಿಚಾರಿಸಿದಾಗ ಸೌಂಡ್ ವಿಭಾಗದ ಮುಖ್ಯಸ್ಥ ಎಮ್.ರಾಮಮೂರ್ತಿಯವರು ಸುಬ್ಬಣ್ಣನವರ ಪರಿಚಯ ಮಾಡಿಕೊಟ್ಟು 'ಹಿ ಈಸ್ ದಿ ಕ್ಲಲ್ಪ್ರಿಟ್' ಎಂದರಂತೆ. ಅಂತೆಯೇ ಸರ್ ಎಮ್.ವಿಶ್ವೇಶ್ವರಯ್ಯನವರ ಒಂದು ದೊಡ್ಡ ಸೈಜ್‌ನ ವರ್ಣಚಿತ್ರವನ್ನು ವರ್ತಿ ಕಾಗದಗಳಿಂದ ತಯಾರಿಸಿ ತಮ್ಮ ಮನೆಯಲ್ಲಿ ಬಹಳ ಕಾಲ ಗೋಡೆಯ ಮೇಲೆ ಹಾಕಿದ್ದರಂತೆ.

## ಬೆಳಕು ಸಂಯೋಜನೆ ಮತ್ತು ನಿರ್ವಹಣೆ

ಸುಬ್ಬಣ್ಣನವರು, ನಾಟಕದ ಎಲ್ಲ ವಿಭಾಗಗಳಲ್ಲೂ ಸೇವೆಯನ್ನು ಸಲ್ಲಿಸಿದ್ದರೂ ಅವರ ಅತ್ಯಂತ ಪ್ರಿಯವಾದ ವಿಭಾಗ ಆಪ್ಟಿಕ್ಸ್-'ಬೆಳಕು' ಎಂದೇ ಕಾಣುತ್ತದೆ. ಶಾಲಾ ವ್ಯಾಸಂಗದ ಸಮಯದಲ್ಲಿ ಟಿನ್ ಶೀಟುಗಳಿಂದ ಬೆಳಕು ಪ್ರತಿಫಲಿಸುವುದರಿಂದ ಪ್ರಾರಂಭಿಸಿ ಬೆಂಗಳೂರಿನಲ್ಲಿ ದೊರೆಯುವ ಅತ್ಯಾಧುನಿಕ ಸಾಧನಗಳವರೆಗೆ ಎಲ್ಲವನ್ನೂ ಉಪಯೋಗಿಸಿದ್ದಾರೆ. ಎಲ್.ಆರ್.ಡಿ.ಇ.ಯಲ್ಲಿ ದೊರೆತ ತಾಂತ್ರಿಕ ಕೌಶಲ್ಯತೆ ಮತ್ತು ಬಿ.ಎಲ್.ಟಿ.ಯೊಂದಿಗಿನ ಒಡನಾಟಗಳಿಂದ ಬೆಂಗಳೂರಿನಲ್ಲಿ ಸುಬ್ಬಣ್ಣನವರ ಕೌಶಲ್ಯತೆ ದಿನ ದಿನಕ್ಕೂ ಉತ್ತಮಗೊಳ್ಳುತ್ತಾ ಹೋಯಿತು. ಹೊಸ ಹೊಸ ಸಂಶೋಧನೆಯನ್ನು ಕೈಗೊಳ್ಳಲು ಅನುಕೂಲವಾಗುವಂತೆ ತಮಗೆ ತಿಳಿದ ಯಾರೇ ಮುಂದುವರಿದ ದೇಶಗಳ ಪ್ರವಾಸ ಕೈಕೊಂಡರೆ, ಅವರಲ್ಲಿ ವಿನಂತಿಸಿಕೊಂಡು ಬೆಳಕಿಗೆ ವಿಶೇಷವಾಗಿ ಬೇಕಾಗಿದ್ದ ಫಿಲ್ಟರ್ಸ್, ಡಿಫ್ಯೂಸರ್ಸ್

ಮುಂತಾದುವುಗಳನ್ನು ತರಿಸಿಕೊಂಡು ಉಪಯೋಗಿಸುತ್ತಿದ್ದರು. ಇವುಗಳು ಬೆಂಗಳೂರಿನಲ್ಲಿ ಎಲ್ಲಿಯೂ ದೊರೆಯದಿದ್ದುದರಿಂದ ಉಪಯೋಗಿಸಿದಾಗ ಆಗುತ್ತಿದ್ದ ಪರಿಣಾಮ ಬೆರಗುಗೊಳಿಸುವಂತೆ ಇರುತ್ತಿದ್ದವು. ಇದರಲ್ಲಿ ಒಂದು ಸಾಧನ 'ಸರ್ಪ್ರೈಸ್ ಬ್ಲೂ' ಅತ್ಯಾಕರ್ಷಕವಾಗಿದ್ದು ಇದರ ಮೂಲಕ ಹೊರ ಹೊಮ್ಮುವ ಬೆಳಕು ಗುಲಾಬಿ ಬಣ್ಣದ್ದಾಗಿರುತ್ತಿದ್ದಿತು.

ತಮ್ಮ ಈ ಕೌಶಲ್ಯತೆಯನ್ನು ಗುರುತಿಸಿ ಪ್ರತಿಭಾವಂತ ನಿರ್ದೇಶಕರುಗಳು ಸುಬ್ಬಣ್ಣನವರನ್ನು ತಮ್ಮ ಪ್ರದರ್ಶನಗಳಿಗೆ ಬೆಳಕು ಸಂಯೋಜಿಸಲು ಆಹ್ವಾನಿಸುತ್ತಿದ್ದರು. ಪ್ರಭಾತ್‌ಶಿಶು ವಿಹಾರದವರು ಬೆಳಕು ಸಂಯೋಜನೆ ಮಾಡಿದಾಗ ಸುಬ್ಬಣ್ಣನವರನ್ನು ಸೈಕ್ಲೋರಮ ಅಳವಡಿಸಲು ಕರೆಯುತ್ತಿದ್ದರು. ಬಿ.ಸಿ.ಯವರು, ಶ್ರೀರಂಗ 'ಸಂಜೀವಿನೀ' ನಿರ್ದೆಶಿಸಿದಾಗ ಸುಬ್ಬಣ್ಣನವರರ ಬೆಳಕು ಸಂಯೋಜನೆ, ಬಿ.ಸಿ.ಯವರು ತಾವು ಹೇಳಿದ್ದನ್ನು ಬಿಟ್ಟು ಬದಲಾವಣೆಗೆ ಕ್ರಾಸ್ ಲೈಟಿಂಗ್‌ಗೆ ಒಪ್ಪಿಸಿದ್ದು ಒಂದು ಸಾಧನೆಯೆಂದೇ ಸುಬ್ಬಣ್ಣನವರು ನಂಬಿದ್ದಾರೆ. ಡಾ.ಜೀವರಾಜ್ ಆಳ್ವಾ, ಮೆಡಿಕಲ್ ಕಾಲೇಜ್ ವತಿಯಿಂದ ಕಾಶ್ಮೀರದಲ್ಲಿ ನಾಟಕ ಪ್ರದರ್ಶಿಸಿದಾಗ, ಶಕುಂತಲೆ ವೀಣೆಯ ಮೇಲೆ ನೃತ್ಯ ಮಾಡುವುದನ್ನು ನೆರಳು-ಬೆಳಕಿನಲ್ಲಿ ಸಂಯೋಜನೆ ಮಾಡಿದ್ದು ಒಂದು ವೈಶಿಷ್ಟ್ಯ. ಅಂತೆಯೇ ಪ್ರಸನ್ನರ 'ಗರೀಬೀ ಹಠಾವ್' ನಾಟಕ ಮತ್ತು “ತುಪ್ಪ' (ಬಿ.ಕೃಷ್ಣ) ಅವರ ಕುವೆಂಪು ಹಾಗೂ ಕೈಲಾಸಂ ನಾಟಕ ಚಕ್ರಗಳಿಗೆ ಬೆಳಕು ಸಂಯೋಜಿಸಿದ್ದಲ್ಲದೆ 'ರಂಗ ಸಂಪದ'ಕ್ಕೆ ವಿ.ರಾಮಮೂರ್ತಿಯವರ ಜೊತೆಯಾಗಿ ಬೆಳಕು ಸಂಯೋಜಿಸಿದ್ದಾರೆ.

ರಂಗದ ಹಿಂದೆ ಕಾರ್ಯ ನಿರ್ವಹಿಸುವಾಗ ಕೆಲ ಸಂದರ್ಭಗಳು ಹಾಸ್ಯದ ತುಣುಕುಗಳಾಗಿ ರಂಗಕರ್ಮಿಗಳು ಏಕತಾನತೆಯನ್ನು ನಿವಾರಿಸುತ್ತಿದ್ದಿತು. ಒಮ್ಮೆ ಸುಬ್ಬಣ್ಣನವರು, ಬಿ.ಎಲ್.ಟಿ.ಯ ಡೇವಿಡ್ ಹಾರ್ಸಬರೋರೊಂದಿಗೆ ಬೆಳಕು ಸಾಧನಗಳನ್ನು ಬಾಡಿಗೆಗೆ ಕೊಡುತ್ತಿದ್ದವರೊಬ್ಬರ ಬಳಿ ಹೋಗಿದ್ದರು. ಮಾಲೀಕ ಜಂಭ ಕೊಚ್ಚಿಕೊಳ್ಳುವುದು ಜಾಸ್ತಿ. ತಮ್ಮ ಬಳಿ ಇರುವ ಸಾಧನಗಳಲ್ಲಿ ಪ್ರತಿಯೊಂದನ್ನೂ 'ಇದು ಅಮೆರಿಕದಿಂದ ತರಿಸಿದ್ದು' ಇದು ನಮಗೆ ತಿಳಿದವರೊಬ್ಬರು ಜಪಾನ್‌ನಿಂದ ಕಳಿಸಿದ್ದು', ಇದು ನಮ್ಮ ಸ್ನೇಹಿತರು ಜರ್ಮನಿಗೆ ಹೋದಾಗ ತಂದದ್ದು' ಎಂದು ಪ್ರತಿಯೊಂದು ವಸ್ತುವಿಗೂ ಕಾಲ್ಪನಿಕವಾಗಿ ಹೊರದೇಶದ ಮೂಲವನ್ನು ಹೇಳುತ್ತಿದ್ದರು. ಕಲಾಸೀಪಾಳ್ಯದ ಗುಜರಿ ವಸ್ತುವಿಗೂ ಇದೆ ರೀತಿ ಹೇಳಿ ತಮ್ಮ ಅಂಗಡಿ ಅತ್ಯಂತ ಶ್ರೇಷ್ಠ ಗುಣಮಟ್ಟದ್ದೆಂದು ಸಾರುವ ಬಯಕೆ ಅವರದು. ಹಾರ್ಸಬರೋರವರಿಗೆ ಇದು ವಿಪರೀತವೆನಿಸಿ ಲಘುವಾಗಿ “ನಿಮ್ಮಲ್ಲಿ ಫಾರ್ಟಿಂಗ್ ಮೆಶೀನ್ ಇದೆಯಾ' ಎಂದು ಕೇಳಿದರು. ಅದಕ್ಕೆ ಆ ಮಾಲೀಕ 'ಓ, ಇದೆ. ಬರೀ ೬ ತಿಂಗಳಾಯಿತು ಬಂದು, ಜರ್ಮನಿಯಿಂದ ತರಿಸಿದ್ದು, ನಮ್ಮ ಇಂಡಿಯನ್ ಮೇಕ್ ಮೆಶಿನ್‌ಗಳು ಇಷ್ಟು ಚೆನ್ನಾಗಿ ಕೆಲಸಾ ಮಾಡಲ್ಲ ಬಿಡಿ' ಎಂದು ಹೇಳಿದ್ದನ್ನು ಇಬ್ಬರೂ ಅಂಗಡಿಯಿಂದ ಹಿಂತಿರುಗಿದ ಮೇಲೆ ಜ್ಞಾಪಿಸಿಕೊಂಡು ನಕ್ಕಿದ್ದೂ ನಕ್ಕಿದ್ದೆ.

## ವಸ್ತ್ರ ವಿನ್ಯಾಸ

ಶಾಸ್ತ್ರೀಯವಾಗಿ ವಸ್ತ್ರ ವಿನ್ಯಾಸ ಮಾಡುವ ಸುಬ್ಬಣ್ಣನವರು ಯಾವುದೇ ಕೆಲಸಕ್ಕೆ ಒಪ್ಪಿಗೆ ಕೊಟ್ಟರೂ, ಒಪ್ಪಿಕೊಂಡ ಮರು ಗಳಿಗೆಯಿಂದಲೇ ಪಾತ್ರಕ್ಕೆ ಒಪ್ಪುವ ಉಡುಪಿನ ಬಗೆಗೆ ದೊರೆಯುವ ಎಲ್ಲ ಗ್ರಂಥಗಳನ್ನೂ ಓದಿ,

ಸಂಶೋಧನಾ ಭಾವದಿಂದ ತಮ್ಮ ಅನಿಸಿಕೆಗಳಿಗೆ ಚಿತ್ರದ ರೂಪ ರೇಖೆಯನ್ನು ಕೊಟ್ಟು, ನಿರ್ದೇಶಕರ ಒಪ್ಪಿಗೆಯ ನಂತರವೇ ನಿರ್ವಹಣೆ ಪ್ರಾರಂಭಿಸುವುದು ರೂಢಿ. ಎಮ್.ವಿ.ಕೃಷ್ಣಸ್ವಾಮಿಯವರು, ಪುಣೆಯಲ್ಲಿ ಸಂಸ್ಕೃತದಲ್ಲಿ ಹ್ಯಾಮ್ಲೆಟ್ ನಾಟಕವನ್ನು ಪ್ರಾಯೋಜಿಸಿದಾಗ ಸುಬ್ಬಣ್ಣ ತಾಂತ್ರಿಕ ವಿಭಾಗಕ್ಕೆ ಸಂಪೂರ್ಣವಾಗಿ ಮುಖ್ಯಸ್ಥರಾಗಿ ನಿಯಮಿತರಾಗಿದ್ದರಲ್ಲದೆ ವಸ್ತ್ರ ವಿನ್ಯಾಸವನ್ನೂ ನಿರ್ವಹಿಸಿದ್ದರು. ನಾಗೇಶ್, ಪರೇಶ್ ಮತ್ತು ವಲ್ಲೀಶರು ಬೇರೆ ಬೇರೆ ವಿಭಾಗಗಳನ್ನು ವಹಿಸಿಕೊಂಡಿದ್ದರು.

೧೯೭೭-೭೮ರಲ್ಲಿ ವಸ್ತ್ರ ವಿನ್ಯಾಸವನು ಮೈಸೂರ್ ಯೂನಿವರ್ಸಿಟಿ ಕಾಲೇಜ್ ಆಫ್ ಫೈನ್ ಆರ್ಟ್ಸ್ ಸಿಂದುವಳ್ಳಿ ಅನಂತಮೂರ್ತಿ, ಪ್ರೇಮ ಕಾರಂತರಿಗೆ ಒಪ್ಪಿಸಿತ್ತು. ಅನಿವಾರ್ಯವಾಗಿ ಪ್ರೇಮ ಕಾರಂತರು ಅದರಿಂದ ಹಿಂಜರಿದಾಗ, ಸುಬ್ಬಣ್ಣ ಆ ಕಾರ್ಯವನ್ನು ತೃಪ್ತಿಕರವಾಗಿ ನೆರವೇರಿಸಿಕೊಟ್ಟಿದ್ದರು. ಎಮ್.ಎಸ್.ಕೆ. ಪ್ರಭು ಅವರ 'ಮಹಾ ಪ್ರಸ್ಥಾನ' ನಾಟಕದಲ್ಲಿ ಹಲವಾರು ವರ್ಷಗಳು ರಾಜ್ಯಭಾರ ಮಾಡಿದ್ದರೂ, ಇನ್ನೂ ಹೆಚ್ಚು ಕಾಲ ಆಡಳಿತ, ತನ್ನ ಕೈನಲ್ಲೇ ಇರಬೇಕೆಂದು ಪ್ರಯತ್ನಿಸಿ, ಸೋತು, ರಾಜ ಕ್ಷೀಣವಾಗಿ ಹೋಗುತ್ತಾ ಕೊನೆಗೆ ಅದೃಶ್ಯವಾಗುವ ಸಂದರ್ಭ. ರಾಜನ ಪಾತ್ರಕ್ಕೆ ಸಂಪೂರ್ಣವಾಗಿ ದೇಹವನ್ನು ಬಿಗಿಯಾಗಿ ಮುಚ್ಚಿರುವ ಉಡುಪನ್ನು (ಸ್ಟಾಕಿಂಗ್ಸ್), ವಿಶೇಷವಾಗಿ ಚರ್ಮ ಬಣ್ಣದ ಸ್ಟ್ರೇಚ್ಲಾನ್ ಬಟ್ಟೆಯನ್ನು ಉಪಯೋಗಿಸಿ ತಯಾರಿಸಿದ ಒಳ ಉಡುಪನ್ನು ಸುಬ್ಬಣ್ಣ ತಯಾರಿಸಿದ್ದರು. ರಾಜ ಅದೃಶ್ಯವಾಗುವ ಸಂದರ್ಭದಲ್ಲಿ, ಅವನು ಮೇಲ್ಪದರದ ಬಟ್ಟೆಯನ್ನೆಲ್ಲಾ ಕಳಚುತ್ತಾ, ಕೊನೆಗೆ ಒಳ ಉಡುಪಿನಲ್ಲಿ ಮಾತ್ರ ಇದ್ದಾಗ, ಬೆಳಕಿನ ವ್ಯವಸ್ಥೆಯಿಂದ ಪೂರ್ಣ ನಗ್ನ ಪಾರ್ಶ್ವಚಿತ್ರ (ಪ್ರೊಫೈಲ್) ಕಾಣುವಂತೆ ಸಂಯೋಜಿಸಿದಾಗ ಅದನ್ನು ಉಪಯೋಗಿಸಲು ಪಾತ್ರಧಾರಿ ಹಿಂಜರಿದಂತೆ ಸುಬ್ಬಣ್ಣನವರು ಅವರಿಗೆ 'ನೀವೇನೂ ಯೋಚನೆ ಮಾಡಬೇಡಿ, ಅದನ್ನು ಧರಿಸಿದ್ದನ್ನು ಮರೆತು ನಿಮ್ಮ ಪಾಡಿಗೆ ನೀವು ಆಕ್ಟ್ ಮಾಡಿ' ಎಂದು ಹೇಳಿದರಂತೆ. ಪಾತ್ರಧಾರಿ ಟಿ.ಎಸ್.ಕೃಷ್ಣಮೂರ್ತಿಯ ಉತ್ತಮ ಅಭಿನಯದಿಂದ ಆ ದೃಶ್ಯ ಉತ್ತಮವಾಗಿ ಮೂಡಿಬಂದಿರುವುದು ಸುಬ್ಬಣ್ಣನವರ ಜಾಣ್ಮೆಯ ವಸ್ತ್ರ ವಿನ್ಯಾಸದಿಂದಲೆ. ಅಂತೆಯೇ ಅಂದಿನ ಪ್ರಸಿದ್ಧ ಹವ್ಯಾಸೀ ನಟಿಯೊಬ್ಬರು, ಸಂಜೀವಿನಿ ನಾಟಕದಲ್ಲಿ ಸುಬ್ಬಣ್ಣನವರು ತಯಾರಿಸಿದ ಉಡುಪನ್ನು ಧರಿಸಿ, ಉಡುಪು ತಮ್ಮ ಪಾದವನ್ನು ಸಂಪೂರ್ಣವಾಗಿ ಮುಚ್ಚುತ್ತಿರಲಿಲ್ಲವೆಂದು ಆಕ್ಷೇಪಿಸಿದಾಗ, 'ನೋಡೀ, ನಾವು ವಸ್ತ್ರಗಳನ್ನು ಸಂಯೋಜಿಸುವುದು ನಿಮ್ಮ ಸೌಂದರ್ಯವನ್ನು ಎತ್ತಿ ಹಿಡಿಯುವುದಕ್ಕಲ್ಲಾ, ನೀವು ಇಲ್ಲಿ ದೇವಯಾನಿ ಪಾತ್ರಧಾರಿ. ಇದು ಆಶ್ರಮ, ಇಲ್ಲಿ ನೆಲ ಗುಡಿಸುವಂತೆ ಯಾರೂ ವಸ್ತ್ರಗಳನ್ನು ಧರಿಸುವುದಿಲ್ಲ, ಸುಮ್ಮನೆ ಇದನ್ನು ಧರಿಸಿ ನಿಮ್ಮ ಅಭಿನಯದ ಬಗೆಗೆ ಕೇಂದ್ರೀಕರಿಸಿ' ಎಂದು ಖಾರವಾಗಿ ಹೇಳಿ ನಟಿಯನ್ನು ಸ್ಟೇಜ್‌ಗೆ ಕರೆದೊಯ್ದರು. ಸುಬ್ಬಣ್ಣನವರು ತಮ್ಮ ಅಧ್ಯಾಪನೆಯನ್ನು ಪ್ರಾರಂಭಿಸಿದ್ದೂ ಕಾಸ್ಟ್ಯೂಮ್ ಡಿಸೈನ್‌ನಿಂದಲೇ.

### ಧ್ವನಿ

ನಾಟಕಗಳ ಪ್ರಯೋಗಕ್ಕೆ ಮುಖ್ಯವಾದ ಧ್ವನಿ ವಿಭಾಗದಲ್ಲೂ ಸುಬ್ಬಣ್ಣನವರು ಸಾಕಷ್ಟು ಪರಿಶ್ರಮ ಗಳಿಸಿದ್ದಾರೆ. ಎಲ್.ಆರ್.ಡಿ.ಇ. ಸಂಥೆಯಲ್ಲಿ, ಇವರು ಕಾರ್ಯವಹಿಸುತ್ತಿದ್ದುದು ಧ್ವನಿಗೆ ಸಂಬಂಧಪಟ್ಟ ಅಕೋಸ್ಟಿಕ್ಸ್ ವಿಭಾಗದಲ್ಲಿ. ಅಲ್ಲಿ ಅವರು ಒಂದು ಗ್ರಂಡಿಗಸ್ ಟೇಪ್ ರೆಕಾರ್ಡರ್ ಯಂತ್ರದಲ್ಲಿ ತಮಗೆ ಬೇಕಾದ ಸಂಯೋಜನೆಗಳನ್ನೆಲ್ಲಾ ನಡೆಸುತ್ತಿದ್ದರು. ರಂಗಭೂಮಿಗೆ ಉಪಯುಕ್ತವಾಗಲೆಂದು ಸ್ವಂತವಾಗಿಯೂ ಒಂದು ಸಣ್ಣ ಗ್ರಂಡಿಗ್ಸ್ ಟೇಪ್ ರೆಕಾರ್ಡರ್ ಯಂತ್ರವನ್ನು

ಖರೀದಿಸಿ ಅದರಲ್ಲಿ ಹಕ್ಕಿಗಳ ಚಿಲಿಪಿಲಿ ಮತ್ತಿತರ ಧ್ವನಿಗಳನ್ನು ಮುದ್ರಿಸಿಕೊಂಡು ನಾಟಕಗಳಿಗೆ ಬೇಕಾದಾಗ ಉಪಯೋಗಿಸುತ್ತಿದ್ದರು. ಟೇಪ್ ರೆಕಾರ್ಡರ್‌ನಲ್ಲಿ ಮುದ್ರಿಸಲು ೩ ಬದಲಾಯಿಸಬಹುದಾದ ಟೇಪ್ ವೇಗಗಳಿರುತ್ತವೆ. (೧ ೩/೪), ೩ ೧/೨ ಹಾಗೂ ೭ ಇಂಚುಗಳು.) ಸರ್ದೂಲ್ ಸಂಗ್, ಪ್ರೋಗ್ರಾಮ್ಸ್ ಮುಖ್ಯಸ್ಥರ ಪ್ಲೇ ಬ್ಯಾಕ್ ಮಾಡಿದಾಗ ಒಮ್ಮೆ ಗಂಡಿನ ಧ್ವನಿ ಹೆಣ್ಣು ಧ್ವನಿಯಂತೆ ಕೀರಲಾಗಿ ಬಂದು, ಇನ್ನೊಮ್ಮೆ ಗಡಸು ಗಡುಸಾಗಿ ಕೇಳಿಸುತ್ತಿದ್ದಿತು. ಮುಖ್ಯಸ್ಥರನ್ನು ಉದ್ದೇಶಿಸಿ "ನೋಡಿ, ನೀವು ಮಾತಾಡುವಾಗ ನಿಮಗೆ ಗೊತ್ತಾಗೋದಿಲ್ಲ. ನಿಮ್ಮ ಧ್ವನಿ ಥೇಟ್ ಹೆಣ್ಣು ಧ್ವನಿ ಇದ್ದ ಹಾಗೇ ಇದೆ, ಪ್ರಯತ್ನಪಟ್ಟು ಗಂಡಸಿನಂತೆ ಮಾತನಾಡಲು ಧ್ವನಿಯನ್ನು ಗಡಸು ಮಾಡಿಕೊಂಡಾಗ ಅಸ್ವಾಭಾವಿಕವಾದ ಗಡಸು ಧ್ವನಿ ಬರುತ್ತದೆ, ಟೇಪ್ ರೆಕಾರ್ಡರ್ ಏನೂ ಸುಳ್ಳು ಹೇಳೋದಿಲ್ಲವಲ್ಲಾ' ಎಂದು ಹೇಳಿದರು. ಮುಖ್ಯಸ್ಥರಿಗೆ ಗೊಂದಲವುಂಟಾಗಿ 'ಸರ್ದಾರ್ಜೀ, ಶಾಯದ್ ಆಪ್ ರೆಕಾರ್ಡಿಂಗ್ ಕೆ ವಕ್ತ್ ಫೀಮೇಲ್ ಬಟನ್ ಪ್ರೆಸ್ ಕಿಯಾ ಹೋಗಾ' ಎಂದನಂತೆ.

**ನಿರ್ದೇಶನ**

ಸುಬ್ಬಣ್ಣನವರು ಸುಮಾರು ೩೦ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದು, ಈ ಸಂಖ್ಯೆ ಗಣನೀಯವಾದರೂ ಅವರು ರಂಗದ ಹಿಂದೆ ನೆರವೇರಿಸಿರುವ ಕಾರ್ಯ ಅಗಾಧವಾದುದರಿಂದ ನಿರ್ದೆಶನ, ಹೋಲಿಕೆಯಲ್ಲಿ ಗೌಣವಾಗಿ ಕಾಣುವುದು ಸಹಜ. ಆದರೆ ಇವರು ತಮ್ಮ ನಾಟಕಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ಅಷ್ಟೇ ಉತ್ತಮವಾಗಿ ನಿರ್ದೆಶಿಸಿ ರಂಗ ಪ್ರದರ್ಶನದಲ್ಲಿ ಜಯ ಗಳಿಸಿರುವುದು ಅಷ್ಟೇ ಸತ್ಯ. ಹಂಪಾಪುರ, ಕೆ.ಆರ್.ನಗರ ಮತ್ತು ಮೈಸೂರಿನಲ್ಲಿ ಸುಬ್ಬಣ್ಣ ನಾಟಕಗಳನ್ನು ಆಡಿ, ಆಡಿಸಿದ್ದರೂ ಇವರ ಸತ್ವಯುತ ನಾಟಕಗಳ ಶೋಧನೆ, ಬೆಂಗಳೂರಿನಿಂದ ಆರಂಭವಾಯಿತು. ಪಾಲಿಟೆಕ್ನಿಕ್‌ನಲ್ಲಿ ಯಮನ ಸೋಲು ಪ್ರಾಯೋಜನೆಯೇ ನಂತರ ಇವರು ಹಿಂತಿರುಗಿ ನೋಡಿಲ್ಲ.

ಶ್ರೀರಂಗ ನಾಟಕಗಳನ್ನು ಯಶಸ್ವಿಯಾಗಿ ತಯಾರಿಸಿದ ಕೆಲವೇ ಮಂದಿಯಲ್ಲಿ ಸುಬ್ಬಣ್ಣನವರು ಒಬ್ಬರು. ಶ್ರೀರಂಗದ ಜೊತೆ ಸತತ ಸಂಪರ್ಕ ಹೊಂದಿದ್ದ ಸುಬ್ಬಣ್ಣ ಅವರ ಜೊತೆ ವಿಚಾರ ವಿನಿಮಯ ಮಾಡಿ, ಮಾಗ್ರದರ್ಶನವನ್ನೂ ಪಡೆಯುತ್ತಿದ್ದುದರಿಂದ, ನಾಟಕಕಾರರ ಅಭಿವ್ಯಕ್ತಿಯಲ್ಲದೆ ತಮ್ಮ ವಿವರಣೆಯನ್ನೂ ಸೇರಿಸಿ ನಾಟಕದ ಯಶಸ್ಸಿಗೆ ಬಹುಮಟ್ಟಿಗೆ ಕಾರಣರಾಗಿದ್ದಾರೆ. ಸಮಗ್ರ ಮಂಥನ, ಉತ್ತಮ ಪ್ರಭುತ್ವ ಲೊಳಲೊಟ್ಟೆ, ಕತ್ತಲೆ ಬೆಳಕು ಮತ್ತು ಕೇಳು ಜನಮೇಜಯದಂತಹ ಶ್ರೀರಂಗರ ಉತ್ತಮ ನಾಟಕಗಳನ್ನು ಪ್ರಾಯೋಜಿಸಿದ ಸುಬ್ಬಣ್ಣ ಕನ್ನಡ ನಾಟಕಕಾರರಲ್ಲೇ ಉನ್ನತ ಶ್ರೇಣಿಯಲ್ಲಿರುವ ಕೈಲಾಸಂ, ಲಂಕೇಶ್, ಬಿ.ಸಿ.ನಾ ಕಸ್ತೂರಿ, ನ.ರತ್ನ ಮುಂತಾದವರ ನಾಟಕಗಳನ್ನೂ ಯಶಸ್ವಿಯಾಗಿಸಿದ್ದಾರೆ. ಸುಬ್ಬಣ್ಣನವರ ನಾಟಕಗಳಲ್ಲಿ ಅತ್ಯುತ್ತಮವೆಂದು ಹೆಸರು ಪಡೆದದ್ದು ಸುಬ್ಬಣ್ಣನವರು ನಿರ್ದೆಶಿಸಿ, ಬೆಳಕು ಮತ್ತು ವಸ್ತ್ರ ವಿನ್ಯಾಸದ ಹೊಣೆಯನ್ನೂ ಹೊತ್ತಿದ್ದ ಎಮ್.ಎಸ್.ಕೆ.ಪ್ರಭು ಅವರ 'ಮಹಾ ಪ್ರಸ್ಥಾನ' ನಾಟಕ.

ಸುಬ್ಬಣ್ಣನವರು ತಮ್ಮ ಯಾವುದೇ ರಂಗ ಕಾರ್ಯವನ್ನೂ ಒಂದೇ ತಂಡಕ್ಕೆ ಸೀಮಿತವಾಗಿಸದೆ ವಿವಿಧ ತಂಡಗಳಿಗೆ ಹಂಚಿದ್ದಾರೆ. ಶಾಲಾ ಕಾಲೇಜಿನ ತಮ್ಮ ತಂಡಗಳು, ಸದಸ್ಯತ್ವ ಹೊಂದಿದ್ದ ಸಂಸ್ಥೆಗಳಲ್ಲದೆ ತಮ್ಮಲ್ಲಿ ವಿನಂತಿಸಿಕೊಂಡ ಯಾವುದೇ ವಿಲಾಸೀ ತಂಡಕ್ಕೂ ಅವರು ನಿರ್ದೇಶನದ ಹೊಣೆ ಹೊತ್ತಿದ್ದಾರೆ.

೨೦೦೪ರಲ್ಲಿ ಸುಬ್ಬಣ್ಣನವರು ಅಮೆರಿಕ ಪ್ರವಾಸ ಕೈಕೊಂಡಾಗ ಕ್ಯಾಲಿಫೋರ್ನಿಯಾದ ಕನ್ನಡ ಕೋಟ ನಡೆಸಿದ ಶ್ರೀರಂಗರ ಜನ್ಮಶತಮಾನೋತ್ಸವದ ನಿಮಿತ್ತ ಆ ಕೂಟಕ್ಕೆ ಶ್ರೀರಂಗರ 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ನಾಟಕಕ್ಕೆ ನಿರ್ದೇಶನ ನೀಡಿದ್ದಾರೆ.

## ಅಧ್ಯಯನ, ಅಧ್ಯಾಪನ

ಸುಬ್ಬಣ್ಣನವರು ರಂಗಭೂಮಿಗೆ ಪದಾರ್ಪಣೆ ಮಾಡಿದಾಗಿನಿಂದ ಅದನ್ನು ಗಂಭೀರವಾಗಿ ತೊಡಗಿಸಿಕೊಳ್ಳುವವರೆವಿಗೂ ಕರ್ನಾಟಕದಲ್ಲಿ ಔಪಚಾರಿಕವಾಗಿ ರಂಗಭೂಮಿಯ ಬಗೆಗೆ ಶಿಕ್ಷಣವನ್ನು ಕೊಡುವ ಯಾವ ಸಂಸ್ಥೆಯೂ ಇರಲಿಲ್ಲ. ದೆಹಲಿಯಲ್ಲಿ ಎನ್.ಎಸ್.ಡಿ. ಪ್ರಾರಂಭವಾದದ್ದು ೧೯೫೯ರಲ್ಲಿ. ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಪೂರ್ಣಾವಧಿ ರಂಗಶಿಕ್ಷಣ ಪ್ರಾರಂಭವಾಗಿದ್ದು ೮೦ ರ ಶತಕದಲ್ಲಿ, ನೀನಾಸಂ ವತಿಯಿಂದ. ನೀನಾಸಂ ಪ್ರಾರಂಭವಾಗುವವರೆವಿಗೆ, ಎನ್.ಎಸ್.ಡಿ.ಯಿಂದ ಪದವಿ ಪಡೆದು ಹೊರಬಂದವರಲ್ಲಿ ಕರ್ನಾಟಕ ಮೂಲದವರು ೧೦-೧೨ನ್ನು ಮೀರಿರಲಿಲ್ಲ. ಆದರೂ ಕರ್ನಾಟಕದಲ್ಲಿ ನಟರು, ನಿರ್ದೇಶಕರು ಮತ್ತಿತರ ಯಶಸ್ವೀ ರಂಗಕರ್ಮಿಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದರು.

ಸುಬ್ಬಣ್ಣನವರು ಮಾತ್ರ ರಂಗಭೂಮಿಯ ಬಗೆಗೆ ಔಪಚಾರಿಕ ವಿದ್ಯಾಭ್ಯಾಸವಿಲ್ಲದುದು ಒಂದು ಕೊರತೆಯೆಂದೇ ಭಾವಿಸಿದ್ದರು. ಈ ಕೊರತೆಯನ್ನು ತುಂಬಿಕೊಳ್ಳಲು ಸುಬ್ಬಣ್ಣನವರು ಸ್ವತಃ ತಮಗೆ ಆಸಕ್ತಿಯಿರುವ ವಿಷಯಗಳಲ್ಲಿ ಕೈಗೆಟಕುವ ಪುಸ್ತಕಗಳನ್ನು ತರಿಸಿಕೊಂಡು ಅಧ್ಯಯನಕ್ಕೆ ಪ್ರಾರಂಭಿಸಿದರು. ಚೆನ್ನೈನಲ್ಲಿದ್ದಾಗಲೆಲ್ಲಾ ಅಲ್ಲಿನ ಮೂರ್ ಮಾರ್ಕೆಟ್ಟನ್ನು ಸಂಪೂರ್ಣವಾಗಿ ಹುಡುಕಿ ತಮಗೆ ಬೇಕಾದ ರಂಗ ಸಂಬಂಧೀ ಪುಸ್ತಕಗಳನ್ನು ಖರೀದಿಸುತ್ತಿದ್ದರು. ಪ್ರಾರಂಭದಲ್ಲಿ ಕೆಲವು ಪುಸ್ತಕಗಳು ಅರ್ಥವಾಗದಿದ್ದರೂ, ಕ್ರಮೇಣ ಸತತ ಅಧ್ಯಯನ ಮತ್ತು ರಂಗದಲ್ಲಿ ಅವುಗಳ ಅಳವಡಿಕೆಯಿಂದ ತಮ್ಮ ಗ್ರಹಣ ಶಕ್ತಿಯನ್ನೂ ಹೆಚ್ಚಿಸಿಕೊಂಡರು. ಅಲೆಕ್ಸಾಂಡರ್ ಡೀನ್‌ರವರ 'ಫಂಡಮೆಂಟಲ್ಸ್ ಆಫ್ ಪ್ಲೇಡೈರೆಕ್ಟಿಂಗ್'', ಡೊಗ್ಲಾಸ್ ರೆಸ್ಸೆಲ್‌ರವರ 'ಕಾಸ್ಟ್ಯೂಮ್ ಡಿಸೈನ್, ಬರ್ನಾರ್ಡ್ ಮತ್ತು ಹೆವಿಟ್‌ರ 'ಪ್ಲೇ ಪ್ರೊಡಕ್ಷನ್', 'ಹ್ಯಾಂಡ್‌ಬುಕ್ ಆಫ್ ಸ್ಟೇಜ್ ಕ್ರಾಫ್ಟ್ ಅಂಡ್ ಇಂಡಿಯನ್ ಥಿಯೇಟರ್' ಮತ್ತು ಫ್ರಾಂಕ್ ಎಂ. ವೈಟಿಂಗ್‌ರವರ 'ಅನ್ ಇಂಡ್ರೊಡಕ್ಷನ್ ಟು ದಿ ಥಿಯೇಟರ್' ಇವರ ಅಚ್ಚುಮೆಚ್ಚಿನ ಪುಸ್ತಕಗಳು. ಒಮ್ಮೆ ಪಾರ್ಕರ್ ಅಂಡ್ ಸ್ಮಿತ್‌ರವರ ಸೀನಿಕ್ ಡಿಸೈನ್ ಅಂಡ್ ಸ್ಟೇಜ್ ಲೈಟಿಂಗ್ ಪುಸ್ತಕಕ್ಕೆ ಸುಬ್ಬಣ್ಣ ಆರ್ಡರ್ ಕೊಟ್ಟು ಅದು ಅಂಚೆಯ ಮೂಲಕ ಬಂದಾಗ ಅದನ್ನು ಬಿಡಿಸಿಕೊಳ್ಳಲು ಶಾರದರ ಸಹಾಯ ಅನಿವಾರ್ಯವಾಯಿತು. ಅಂತೆಯೇ ಜಪಾನ್‌ನಿಂದ ಕ್ಯಾಮೆರಾ ತರಿಸಿದಾಗಲೂ ಆರ್ಥಿಕ ವ್ಯವಸ್ಥೆ ಮಾಡಿದ್ದು ಶಾರದಾರವರೆ. ಹೆಚ್ಚಿನ ಅಧ್ಯಯನಕ್ಕೆ ಸುಬ್ಬಣ್ಣನವರು ಬ್ರಿಟಿಷ್ ಕೌನ್ಸಿಲ್ ಮತ್ತು ಅಮೆರಿಕನ್ ಕೌನ್ಸಿಲ್ ಸದಸ್ಯರಾಗಿದ್ದರು. ವೆಂಕಿಯವರ ಸಹಾಯದಿಂದ ಅಮೆರಿಕನ್ ಕೌನ್ಸಿಲ್‌ನಲ್ಲಿ ಇವರಿಗೆ ಮಿತಿಯಿಲ್ಲದೆ ಪುಸ್ತಕಗಳು ದೊರೆಯುತ್ತಿದ್ದವು. ತಾತ್ವಿಕ ವಿದ್ಯೆಗೆ ಈ ಪುಸ್ತಕಗಳು ಹಾಗೂ ಅನುಭವಕ್ಕೆ ಬೆಂಗಳೂರು ರಂಗಭೂಮಿ-ಸುಬ್ಬಣ್ಣನವರು ನೈಪುಣ್ಯತೆ ಪಡೆಯಲು ಸಾಕಷ್ಟು ಸಹಕಾರಿಯಾದವು.

ತಾವು ಸ್ವಯಾರ್ಜಿತವಾಗಿ ಕಲಿತ ವಿದ್ಯೆಯನ್ನು ಇತರರಿಗೆ ಹಂಚಲು ಸುಬ್ಬಣ್ಣ ಎಂದೂ ಹಿಂಜರಿಯಲಿಲ್ಲ. ಅವಕಾಶ ಒದಗಿದ ತಕ್ಷಣದಿಂದಲೇ ಅಧ್ಯಾಪನದಲ್ಲೂ ಅವರು ತಮ್ಮನ್ನು ತೊಡಗಿಸಿಕೊಂಡರು. ಎ.ಎಸ್.ಮೂರ್ತಿಯವರ

ತಂದೆ ಗಾಂಧೀ ಬಜಾರ್‌ನಲ್ಲಿ ಒಂದು ಮನೆಯ ಮಹಡಿಯಲ್ಲಿ ನಡೆಸುತ್ತಿದ್ದ ಪ್ರತಿ ಭಾನುವಾರದ ಕಾರ್ಯಕ್ರಮದಲ್ಲಿ ಅವರು ಒಂದು ದಿನ ತಮ್ಮ ಭಾಷಣವನ್ನು ನಡೆಸಿಕೊಟ್ಟಿದ್ದರು. ಆದರೆ ಗಂಭೀರವಾಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಪಾಠ ಹೇಳಲು ಪ್ರಾರಂಭಿಸಿದ್ದು, ಸಿಂಧುವಳ್ಳಿ ಅನಂತಮೂರ್ತಿಯವರು ಪ್ರಾಂಶುಪಾಲರಾಗಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜಿನಲ್ಲಿ. ಅವರು ಪ್ರಥಮವಾಗಿ ವೇಷಭೂಷಣವನ್ನು ಬೋಧಿಸಿ ನಂತರ ಕ್ರಮೇಣವಾಗಿ ಬೆಳಕು ಮತ್ತು ಪ್ರಸಾಧನವನ್ನೂ ಬೋಧಿಸತೊಡಗಿದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಬೋಧಿಸಿ ನಂತರ ಕೇರಳದ ತ್ರಿಚೂರಿನ ಕಾಲೇಜಿನಲ್ಲಿ ಕ್ಯಾಲಿಕಟ್ ವಿಶ್ವವಿದ್ಯಾನಿಲಯಕ್ಕೋಸ್ಕರ ರಂಗ ಸಜ್ಜಿಕೆ, ವೇಷಭೂಷಣ ಹಾಗೂ ಬೆಳಕು ವಿಷಯಗಳ ಬಗೆಗೆ ಪಾಠ ಹೇಳುತ್ತಿದ್ದರು.

ಪ್ರಾರಂಭದಲ್ಲಿ ವಿ.ರಾಮಮೂರ್ತಿಯವರು, ತಮ್ಮ ಜೊತೆಯಲ್ಲಿ ಬೋಧಿಸುತ್ತಿದ್ದ ಸುಬ್ಬಣ್ಣನವರಿಗೆ ಅಭ್ಯಾಸ ಕ್ರಮ ಮುಂತಾದುವನ್ನು ತೋರಿಸುವ ನಿಬಂಧನೆಯನ್ನು ಹಾಕುತ್ತಿದ್ದಾಗ ಸ್ವಲ್ಪ ಇರುಸು ಮುರುಸು ಆಗುತ್ತಿತ್ತಾದರೂ ಕ್ರಮೇಣ ಮೈ ಚಳಿ ಬಿಡಿಸಿಕೊಂಡು ಪಾಠ ಹೇಳುತ್ತಿದ್ದರು. ಸುಬ್ಬಣ್ಣನವರು ಒಂದು ಟೆಕ್ಸ್ಟ್ ಬುಕ್ ಕಮಿಟಿಯಲ್ಲೂ ಸದಸ್ಯರಾಗಿದ್ದು ಸೆಟ್ ಡಿಸೈನ್ ಬಗೆಗೆ ಪಾಠ ವಿಷಯದ ಕ್ರಮವನ್ನೂ ರೂಪಿಸಿದ್ದಾರೆ. ಈ ರೀತಿ ಸ್ವಯಾರ್ಜಿತ ವಿದ್ಯೆಯನ್ನು ಛಾಯಾ ಇನ್ಸ್ಟಿಟ್ಯೂಟ್ ಆಫ್ ಡ್ರಮಟಿಕ್ಸ್‌ನಲ್ಲಿ ಬೋಧಿಸುತ್ತಿದ್ದಾಗ, ಪರೀಕ್ಷೆ ಸಮಯದಲ್ಲಿ ಇನ್ಸ್ಟಿಟ್ಯೂಟ್ ಅಧಿಕಾರಿಗಳು ಸುಬ್ಬಣ್ಣನವರನ್ನು ಕುರಿತು “ನೀವೂ ಪರೀಕ್ಷೆ ಬರೆಯಿರಿ, ನಿಮಗೂ ಡಿಪ್ಲೋಮಾ ಕೊಡುತ್ತೇವೆ ಎಂದು ಹೇಳಿದಾಗ ಅವರು ಒಪ್ಪಿ ಪರೀಕ್ಷೆ ಬರೆದು, ಅಲ್ಲಿನ ಡಿಪ್ಲೋಮವನ್ನು ಗಳಿಸಿದರು.

**ಗುರು ಶಿಷ್ಯ ಸಂಬಂಧ**

ಸುಬ್ಬಣ್ಣನವರು, ವಿಶ್ವವಿದ್ಯಾನಿಲಯಗಳು, ಸಂಸ್ಥೆಗಳು ಮತ್ತು ಕಮ್ಮಟಗಳಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಬೋಧಿಸಿದ್ದಾರೆ. ಅವರು ಅಪರೂಪದ ಮೇಷ್ಟ್ರು ಎಂದು ಎಲ್ಲಾ ವಿಷಯಗಳಲ್ಲೂ ಹೆಸರು ಗಳಿಸಿದ್ದರೂ, ವಿಶೇಷವಾಗಿ ಸೆಟ್ ಡಿಸೈನ್ ವಿಷಯದಲ್ಲಿ ಹೆಸರು ಗಳಿಸಿದ್ದಾರೆ. ಅವರ ತಿಳುವಳಿಕೆಯ ಆಳ ಮತ್ತು ಉತ್ತಮ ಬೋಧನಾ ಕ್ರಮ ಅವರಿಗೆ ಈ ಹೆಸರನ್ನು ದೊರಕಿಸಿಕೊಟ್ಟಿದೆ. ಅವರ ಎಲ್ಲ ವಿದ್ಯಾರ್ಥಿಗಳಲ್ಲೂ ಅವರು ಸ್ನೇಹಿತರೆಂದೇ ಪರಿಗಣಿಸಿ ಸ್ನೇಹ ಭಾವದಿಂದಲೇ ಅವರ ಜೊತೆ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ.

**ಹಾಸ್ಯಪ್ರಜ್ಞೆ**

ಸುಬ್ಬಣ್ಣನವರ ಹಾಸ್ಯ ಪ್ರಜ್ಞೆ ಅವರಿಗೆ ಸಂಪರ್ಕವಿರುವ ಎಲ್ಲ ಕಡೆಗಳಲ್ಲೂ ಎದ್ದು ಕಾಣುತ್ತದೆ. ಅವರು ಕೆಲಸ ಮಾಡುತ್ತಿದ್ದುದು ಎಲ್.ಆರ್.ಡಿ.ಇ.ಯಲ್ಲಿ. ಸಾರ್ವಜನಿಕ ಭಾಷಣಗಳಲ್ಲಿ ಅವರು ಎಲ್.ಆರ್.ಡಿ.ಇ.ಯನ್ನು ''ಎಲ್ಲರಡಿ' ಎಂದು ಮಾಡಿ, ನಾನು ಎಲ್ಲರಡಿ ಕೆಲಸ ಮಾಡುತ್ತೇನೆಂದು ವಿನಯದಿಂದ ಹೇಳಿ 'ಎನಗಿnತಾ ಕಿರಿಯರಿಲ್ಲಯ್ಯಾ' ಎಂದೂ ಸೇರಿಸುತ್ತಾರೆ. ಅವರ ಕೌಟುಂಬಿಕ ವಿಷಯ ಪ್ರಸ್ತಾವನೆಯಾದಾಗ, 'ನಾನು ಮನೆಯಲ್ಲಿ 3rd preferential pati' ಎಂದು ಹೇಳುತ್ತಾರೆ. ವಿವರಣೆ ಕೇಳಿದರೆ ಶಾರದನಿಗೆ 1st preferential pati ಅಂದರೆ ಗಣಪತಿ, ಏಕೆಂದರೆ ಹಲವಾರು ವರ್ಷಗಳಿಂದ ಗಣಪತಿ ವಿಗ್ರಹಗಳನ್ನು ಸಂಗ್ರಹಿಸುತ್ತಿದ್ದಾರೆ. ಈಗಾಗಲೇ ಸುಮಾರು ೧೦೦೦ ಗಣಪತಿಗಳನ್ನು

ಸಂಗ್ರಹಿಸಿರಬಹುದು. ಅವರ ಜೀವನವನ್ನೇ ಅವರ ವೈದ್ಯಕೀಯ ಸೇವೆಗೆ ಮುಡುಪಾಗಿಟ್ಟಿರುವುದರಿಂದ, 2nd preferential pati ಹೋಮಿಯೋಪತಿಯೇ ಆಗಿರಬೇಕು. ಇನ್ನುಳಿದ ಕೊನೆ ಪತಿ - ನಾನು - 3rd preferential ಪತಿಯಲ್ಲದೆ ಮತ್ತಿನ್ನೇನು ಆಗಲು ಸಾಧ್ಯ? - ಖಂಡಿತವಾಗಿಯೂ 'ಕರೋಡ್‌ಪತಿ'ಯಂತೂ ಅಲ್ಲವೇ ಅಲ್ಲ ಎಂದು ಹೇಳುತ್ತಾರೆ.

**ನಗರದ ರಂಗ ಚಟುವಟಿಕೆಗಳ ದಾಖಲೆ**

ಸುಬ್ಬಣ್ಣನವರ ಇನ್ನೊಂದು ಇದುವರೆವಿಗೂ ಕೈಗೂಡದ ಹೆಬ್ಬಯಕೆಯೆಂದರೆ ಬೆಂಗಳೂರು ನಗರದ ರಂಗ ಚಟುವಟಿಕೆಗಳ ದಾಖಲೆ. ಕರ್ನಾಟಕದಲ್ಲಿ ಬೆಂಗಳೂರೇ ಅಲ್ಲದೆ ಮೈಸೂರು, ತುಮಕೂರು, ಹುಬ್ಬಳ್ಳಿ - ಧಾರವಾಡದಂತಹ ಅನೇಕ ನಗರ ಪ್ರದೇಶಗಳಲ್ಲಿ ಮತ್ತು ಹೆಗ್ಗೋಡು ಹಾಗೂ ಸಾಣೆಹಳ್ಳಿಗಳಂತಹ ಅನೇಕ ಪ್ರದೇಶಗಳಲ್ಲಿ ಉತ್ಕೃಷ್ಟವಾದ ರಂಗ ಚಟುವಟಿಕೆಗಳು ನಡೆಯುತ್ತಿದ್ದರೂ, ಬೆಂಗಳೂರಿನಲ್ಲಿ ಬೇರೆ ಬೇರೆ ಪ್ರದೇಶಗಳ ಉತ್ತಮ ಕಾರ್ಯಕ್ರಮಗಳು ಪುನರಾವರ್ತನೆಗೊಳ್ಳುವುದು ಮತ್ತು ಇಲ್ಲಿಯೇ ನಡೆಯುವ ಕಾರ್ಯಕ್ರಮಗಳನ್ನು ಸಾಮಾನ್ಯವಾಗಿ, ಇಡೀ ಕರ್ನಾಟಕದ ಪ್ರಾತಿನಿಧಿಕ ರಂಗ ಚಟುವಟಿಕೆಯೆಂದೇ ಭಾವಿಸಬಹುದು. ಅಲ್ಲದೆ ಸುಬ್ಬಣ್ಣನವರ ವಾಸ್ತವ್ಯ ಬೆಂಗಳೂರು ಆದುದರಿಂದ ತಮ್ಮ ಸುತ್ತಮುತ್ತಿನ ರಂಗದಾಖಲೆ ಸ್ವಾಭಾವಿಕವಾಗಿ ಕಡಮೆ ಪ್ರಯಾಸದ ಕೆಲಸ.

ಚಿಕ್ಕ ವಯಸ್ಸಿನಿಂದಲೇ ತಮ್ಮ ಎಲ್ಲಾ ಚಟುವಟಿಕೆಗಳ ದಾಖಲಾತಿಗಾಗಿ ತಾವು ಹೋದೆಡೆಯಲ್ಲೆಲ್ಲಾ ಒಂದು ಕ್ಯಾಮೆರಾ ಕೊಂಡೊಯ್ಯುತ್ತಿದ್ದರು. ಯಾವುದೇ ಒಬ್ಬ ವ್ಯಕ್ತಿ ಸಾಮಾಜಿಕ ಘಟನೆ ಅಥವಾ ಒಂದು ಸಂದರ್ಭವನ್ನು ಹೆಚ್ಚು ಕಾಲ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಅವರಿಗೆ ತೋಚುತ್ತಿತ್ತೋ ಅವುಗಳೆಲ್ಲವನ್ನೂ ಅವರು ತಮ್ಮ ಕ್ಯಾಮೆರಾದಲ್ಲಿ ಹಿಡಿಯುತ್ತಿದ್ದರು. ಶಾಲಾ ಕಾಲೇಜು ದಿವಸಗಳಲ್ಲಿ ಒಂದು ಬಾಕ್ಸ್ ಕ್ಯಾಮೆರಾಗೆ ತೃಪ್ತಿಪಟ್ಟಿದ್ದರೂ ರಂಗಭೂಮಿಯ ದಾಖಲೆಗಳಿಗೆ ಅನುಕೂಲವಾಗುವಂತೆ ೧೯೭೮ರಲ್ಲೇ ೧೫೦೦ ರೂಪಾಯಿಗಳನ್ನು ಕೊಟ್ಟು ಒಂದು ಒಳ್ಳೆ ಕ್ಯಾಮೆರಾ ಖರೀದಿಸಿದರು. ಆಗಿನ ಕಾಲಕ್ಕೆ ಇದು ಭರಿಸಲು ಕಷ್ಟಸಾಧ್ಯವಾದ ಬೆಲೆ. ಮುಂದಿನ ದಿನಗಳಲ್ಲಿ ಅವರು ಇನ್ನು ಉತ್ತಮವಾದ ಕ್ಯಾಮೆರಾಗಳನ್ನು ವಿದೇಶಗಳಿಂದ ತರಿಸಿಕೊಂಡಿದ್ದರು. ಇದಕ್ಕೂ ಸಹ ಅವರು ಶಾರದರ ಸಹಾಯವನ್ನೇ ಪಡೆಯಬೇಕಾಯಿತು. ಬೆಂಗಳೂರಿನಲ್ಲಿ ಉತ್ತಮ ತಂಡಗಳು ಅಭಿನಯಿಸಿದ ನಾಟಕಗಳ ಬಗೆಗೆ ಸಿಕ್ಕುವ ಸಾಹಿತ್ಯವನ್ನು (ರಿವ್ಯೂಗಳು, ಬ್ರೋಚರ್‌ಗಳು ಇತ್ಯಾದಿ) ಜೆರಾಕ್ಸ್ ಇಲ್ಲದ ಕಾಲದಲ್ಲೂ ಟೈಪ್ ಮಾಡಿಸಿ ಮತ್ತು ತಂಡಗಳಿಂದ ಕೇಳಿ ಪಡೆದು ಜೋಪಾನವಾಗಿ ಶೇಖರಿಸಿದ್ದಾರೆ. ಈ ಸಂಪಾದನೆಯನ್ನು ಅವರು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ಈಗಾಗಲೇ ಅವರು ನಾಟಕಗಳ ಛಾಯಾಚಿತ್ರಗಳು, ಕರಪತ್ರಗಳು, ಬ್ರೋಚೆರ್ಸ್, ಸುದ್ದಿಗಳು, ವಿಮರ್ಶೆಗಳು, ಲೇಖನಗಳು ಮುಂತಾದುವುಗಳನ್ನು ಸಂಪಾದಿಸಿದ್ದಾರೆ. ಒಂದೊಂದು ದಾಖಲೆಯನ್ನು ಸಂಪಾದಿಸುವುದೂ ಅತಿ ಪ್ರಯಾಸದ ಕೆಲಸ. ಇದಕ್ಕೆ ಬೇಕಾದ ಓಡಾಟ, ತಗಲುವ ವೆಚ್ಚ, ತಮ್ಮ ಧ್ಯೇಯಕ್ಕೆ ಪ್ರಾಯೋಜಿತರು ಸ್ಪಂದಿಸದಿದ್ದಾಗ ಆಗುವ ಮಾನಸಿಕ ಹಿಂಸೆ, ಇವುಗಳನ್ನು ಸಹಿಸುವುದು ಒಬ್ಬ ವ್ಯಕ್ತಿಗೆ ಕ್ಲಿಷ್ಟಕರವಾದ ಸಂಗತಿಯೇ ಸರಿ. ಸಾಮಾನ್ಯವಾಗಿ ವಿಶ್ವವಿದ್ಯಾನಿಲಯಗಳು ಮುಂತಾದ ಸುಸಜ್ಜಿತ ಸಂಘಟನೆಗಳು ಮಾತ್ರ ಮಾಡಬಹುದಾದ ಈ ಕಾರ್ಯವನ್ನು ಯಾವ

ಅಥವಾ ಯಾರ ಸಹಾಯವೂ ಇಲ್ಲದೆ ಸುಬ್ಬಣ್ಣನವರು ಏಕಾಂಗಿಯಾಗಿ ಮಾಡುತ್ತಲೇ ಬಂದಿದ್ದಾರೆ. ಇವು ಬೆಂಗಳೂರಿನ ಇಡೀ ರಂಗ ಸಮಾಜಕ್ಕೆ ದೊರಕುವಂತೆ ಮಾಡಬೇಕಾಗಿದೆ.

ಅವರು ಸಂಪಾದಿಸಿದ ರಂಗ ಸಂಪತ್ತನ್ನು ಅವರು, ಕಾರ್ಯಾಗಾರಗಳ, ತಜ್ಞರ ಸಭೆಗಳು ಹಾಗೂ ಪ್ರದರ್ಶನಗಳನ್ನು ಹಮ್ಮಿಕೊಳ್ಳುವ ತಂಡಗಳಿಗೆ ಧಾರಾಳವಾಗಿ ಕೊಟ್ಟಿದ್ದಾರೆ. ಆದರೆ ಕೆಲವೇ ತಂಡಗಳು ಅವರು ಪಡೆದ ವಸ್ತುಗಳನ್ನು ಅವರಿಗೆ ತಾವಾಗಿಯೇ ಹಿಂತಿರುಗಿಸಿದರೆ ಇನ್ನು ಕೆಲವು ತಂಡಗಳಿಂದ, ಭದ್ರತೆಯ ದೃಷ್ಟಿಯಿಂದ ಸುಬ್ಬಣ್ಣನವರೇ ಅವರ ಬಳಿಗೆ ಎಡೆತಾಕಿ ತಮ್ಮ ವಸ್ತುಗಳನ್ನು ಹಿಂದಕ್ಕೆ ಪಡೆದಿದ್ದಾರೆ. ಅನೇಕ ವಸ್ತುಗಳನ್ನು ಹಿಂದೆ ಪಡೆಯುವುದಕ್ಕಾಗದೆ ಕಳೆದುಹೋಗಿವೆ. ಆದರೂ ಅವರು ಪಟ್ಟಿರುವ ಹಾಗೂ ಪಡುತ್ತಿರುವ ತೀವ್ರ ಪ್ರಯತ್ನದಿಂದ ಅವರ ಕನಸು ಶೀಘ್ರದಲ್ಲಿ ನೆರವೇರುತ್ತದೆಂದು ನಂಬಿಕೆ.

## ಸಾಹಿತಿ ಸುಬ್ಬಣ್ಣ

ಸುಬ್ಬಣ್ಣನವರ ಕೃಷಿ ಕೇವಲ ರಂಗಭೂಮಿಗಷ್ಟೇ ಸೀಮಿತವಾಗಿಲ್ಲ. ಇವರು ಸಾಹಿತ್ಯದಲ್ಲೂ ಸಾಕಷ್ಟು ಕೆಲಸ ಮಾಡಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಇವರ ಪ್ರಥಮ ಪ್ರಯತ್ನ ಮೈಸೂರಿನ ಹೊಯ್ಸಳ ಕರ್ನಾಟಕ ಹಾಸ್ಟೆಲ್‌ನಲ್ಲಿದ್ದಾಗ ಆರಂಭವಾಯಿತು. ಅಲ್ಲಿ ಎಸ್.ಎಲ್.ಭೈರಪ್ಪನವರು ಹಾಸ್ಟೆಲ್ ಡೇಗೋಸ್ಕರ ಸಪಾದಿಸುತ್ತಿದ್ದ ಪತ್ರಿಕೆಗೆ “ನನ್ನ ಪ್ರಯಾಣ' ಎನ್ನುವ ಫಾನ್ಟಸಿಯನ್ನು ಬರೆದು, ಅದು ಪ್ರಕಾಶನಗೊಂಡಿತ್ತು. ಅವರ ಲೇಖನ, ಚುಟುಕು ಮತ್ತು ಕವನಗಳು ವಾರ ಪತ್ರಿಕೆ ಹಾಗೂ ಮಾಸಪತ್ರಿಕೆಗಳಲ್ಲಿ ಪ್ರಕಾಶಗೊಂಡಿವೆ. 'ವಂಡೇ ಮಾತರಂ' ಮತ್ತು 'ಬನದ ಹೂ' ಎರಡು ಪೂರ್ಣ ಪ್ರಮಾಣದ ಕವನ ಸಂಕಲನಗಳು. 'ವಂಡೇ ಮಾತರಂ' ಕವನ ಸಂಕಲನಕ್ಕೆ ೨೦೦೨ರಲ್ಲಿ ಗೊರೂರು ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ ಲಭಿಸಿದೆ.

## ಪರಿಪೂರ್ಣತೆಯನ್ನು ಬಯಸುವ ಸುಬ್ಬಣ್ಣ

ಸುಬ್ಬಣ್ಣನವರು ಕೈಗೊಳ್ಳುವ ಯಾವುದೇ ಕಾರ್ಯದಲ್ಲಾದರೂ ಪರಿಪೂರ್ಣತೆಯನ್ನು ಬಯಸುವುದು ಸುಬ್ಬಣ್ಣನವರ ಜಾಯಮಾನ. ಬಹಳಷ್ಟು ಬಾರಿ ನಿಗದಿತ ವೇಳೆಯಲ್ಲಿ ಕೈಗೊಂಡ ಕಾರ್ಯವನ್ನು ಪೂರ್ಣಗೊಳಿಸುವ ಜವಾಬ್ದಾರಿ ಹೊತ್ತಿರುವ ಸಂದರ್ಭದಲ್ಲಿ ಕೆಲವೊಮ್ಮೆ ರಾಜಿ ಮಾಡಿಕೊಳ್ಳುವುದು ಅನಿವಾರ್ಯ ಹಾಗೂ ಬುದ್ಧಿವಂತಿಕೆ. 'ಕಲಾ ಘೋಷಿಣೆ', ಶ್ರೀರಂಗರ 'ಸಾವಿತ್ರಿ' ನಾಟಕವನ್ನು ಪ್ರಾಯೋಜಿಸಿದಾಗ ಬಿ.ಸಿ, ನಿರ್ದೇಶನದ ಹೊಣೆ ವಹಿಸಿದ್ದರು. ನಾಗೇಶ್ ಗುಂಪು ರಂಗಸಜ್ಜಿಕೆಯನ್ನು ವಹಿಸಿಕೊಂಡಿದ್ದಿತು. ಬಿ.ಸಿ.ಯವರು ಸುಬ್ಬಣ್ಣನವರನ್ನು, ಸಾಂಕೇತಿಕವಾಗಿ ಒಂದು ಸಣ್ಣ ಮರದ ರೂಪುರೇಷೆಯನ್ನು ಹಗ್ಗದಿಂದ ಮಾಡಿ, ಒಂದು ಚೌಕಟ್ಟಿನೊಳಗೆ ಅಳವಡಿಸಿ, ವೇದಿಕೆಯ ಮೇಲೆ ಸ್ಥಾಪಿಸಿ ರಂಗಸ್ಥಳದ ಒಂದು ಮೂಲೆಯಲ್ಲಿ ಪ್ರತಿಷ್ಠಿಸುವಂತೆ ಹೇಳಿದ್ದರು. ಪ್ರದರ್ಶನದ ಹಿಂದಿನ ದಿನ ಅದು ರಿಹರ್ಸಲ್ ಸ್ಥಳದಲ್ಲಿ ಸಿದ್ಧವಾಗಿದ್ದಿತು ಮತ್ತು ನಿರ್ದೇಶಕರಿಗೆ ತೃಪ್ತಿಯನ್ನು ಕೊಟ್ಟಿದ್ದಿತು. ಆದರೆ ಸುಬ್ಬಣ್ಣನವರ ಮನಸ್ಸಿನಲ್ಲಿ ಏನೋ ಕೊರತೆಯಿರಬೇಕೆಂಬ ಭಾವನೆ ತೋರುತ್ತಿತ್ತು. ಪ್ರದರ್ಶನದ ದಿನ ಮಧ್ಯಾಹ್ನ ೨ ಘಂಟೆಯ ಹೊತ್ತಿಗೆ ರಂಗಸಜ್ಜಿಕೆ ಸಂಪೂರ್ಣವಾಗಿದ್ದರೂ ಸುಬ್ಬಣ್ಣನವರ ಕಟ್‌ಔಟ್ ಮಾತ್ರ ಕಾಣಿಸುತ್ತಿರಲಿಲ್ಲ. ೨.೩೦ ಆಯಿತು, ೩ ಆಯಿತು, ೪-೫

ಆದರೂ ಸುಬ್ಬಣ್ಣನವರ ಕಟ್‌ಔಟ್ ಪತ್ತೆಯಿಲ್ಲ. ೭ ಘಂಟೆಗೆ ಪ್ರದರ್ಶನ, ತಂಡದ ಪ್ರತಿಯೊಬ್ಬ ಸದಸ್ಯನಲ್ಲೂ ಎದೆ ಡವ ಡವಗುಟ್ಟುವುದಕ್ಕೆ ಪ್ರಾರಂಭವಾಯಿತು. ಕೊನೆಗೆ ೬.೧೫-೬.೨೦ರಲ್ಲಿ ಸುಬ್ಬಣ್ಣನವರು ಬಂದು ಅದನ್ನು ತೃಪ್ತಿಕರವಾಗಿ ಸ್ಥಾಪಿಸಿದ್ದರು. ಯಾವುದೋ ಸುಬ್ಬಣ್ಣನವರು ಬಯಸಿದ್ದ ಒಂದು ವರ್ಣದ ಚಿಕ್ಕ ವಸ್ತುವಿನಲ್ಲಿ ಸ್ವಲ್ಪ ಬದಲಾವಣೆಯಾಗಿದ್ದುದರಿಂದ ಅವರು ಇಡೀ ಬೆಂಗಳೂರನ್ನು ಸುತ್ತಿ ಬೇಕಾದ ವಸ್ತುವನ್ನೇ ತಂದಿದ್ದರು. ನಮಗಾದರೋ, ಈ ಹುಡುಕಾಟದಲ್ಲಿ, ಆಟೋ ಸಿಗದಿರುವುದು ಅಥವಾ ಇನ್ನು ಯಾವುದಾದರೂ ತೊಂದರೆ ಆಗಿದ್ದರೆ ಏನು ಗತಿ ಎಂಬ ಹೆದರಿಕೆ. ಸುಬ್ಬಣ್ಣನವರಿಗೆ ಆತ್ಮ ವಿಶ್ವಾಸವಿರಬಹುದು. ಆದರೆ ಇತರರಿಗೂ ಇದರ ಬಗೆಗೆ ವಿಶ್ವಾಸವಿರಬೇಕಲ್ಲಾ! ಸುಬ್ಬಣ್ಣನವರ ಪರಿಪೂರ್ಣತೆಯ ಅನ್ವೇಷಣೆಯಲ್ಲಿ ಮತ್ತು ಆತ್ಮ ವಿಶ್ವಾಸವಿದ್ದ ಅವರ ಸಂದೇಹ, ಗೊಂದಲ ಮತ್ತು ಅನುಮಾನಗಳ ಮಾನಸಿಕ ನೆಲೆ ಅನೇಕ ವೇಳೆ ಕೈಕೊಡುವ ಸಂಭವವನ್ನು ಹೆಚ್ಚಿಸುತ್ತದೆ. ಅವರ ಗೊಂದಲದ ಸ್ವಭಾವವನ್ನು ಅವರೇ ಹಾಸ್ಯವಾಗಿ ಸಮರ್ಥ ರಾಮದಾಸರ ಮರಾಠಿ ಭಕ್ತಿ ಗೀತೆ 'ಮಂಗಳಮಯ ನಾಮ ತುಝೆ, ಸತತ ಗಾವುದೇ ..........' ಎಂಬುದನ್ನು, 'ಗೊಂದಲಮಯ ನಾಮ ಮುಝೆ, ಸತತ ಗಾವುದೇ....' ಎಂದು ಬದಲಾಯಿಸಿ ಹೇಳುತ್ತಾರೆ.

**ಮಾನವೀಯತೆ**

ಯಾವುದೇ ವ್ಯಕ್ತಿ, ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ, ಅವನು ರಾಜಕಾರಣಿ, ಸಾಹಿತಿ, ವೈದ್ಯ, ವಿಜ್ಞಾನಿ, ಲಲಿತಕಲಾ ನಿಪುಣ, ಏನೇ ಆಗಿದ್ದರೂ ಅವನ ಘನತೆಯ ಮೌಲ್ಯಮಾಪಕ ಅವನ ಮಾನವೀಯತೆ. ತನ್ನ ಪರಿಸರ ಜೀವಿಗಳ ಬಗೆಗೆ ಅವನು ಹೊಂದಿರುವ ಧೋರಣೆ, ಅನುಕಂಪ ಮತ್ತು ಮಾನವೀಯ ಗುಣಗಳು. ಈ ಎಲ್ಲದರಲ್ಲೂ ಸುಬ್ಬಣ್ಣ ಒರೆಯಿಟ್ಟ ಚಿನ್ನದಂತೆ ಎದ್ದು ಕಾಣುತ್ತಾರೆ. ಅವರು ರಂಗಭೂಮಿಯ ಪರಿಚಯದ ವ್ಯಕ್ತಿಗಳೊಂದಿಗೆ ಮಾತ್ರವಲ್ಲ, ಪ್ರಾಪಂಚಿಕವಾಗಿ ತಮ್ಮ ವ್ಯಾಪ್ತಿಗೆ ಬರುವ ಎಲ್ಲ ಮಾನವ ಜೀವಿಗಳು ಹಾಗೂ ಪ್ರಾಣಿ ವರ್ಗವನ್ನು ದಯೆ ಮತ್ತಿತರ ಮಾನವತಾ ದೃಷ್ಟಿಯಿಂದ ಕಾಣುತ್ತಾರೆ. ಯಾವುದೇ ಒಂದು ಮಗು ಅಥವಾ ಚಿಕ್ಕ ಬಾಲಕ - ಬಾಲಕಿಯನ್ನು ಕಂಡಾಗ ಅವರ ಕೈ ತನಗೆ ತಾನೇ ಜೇಬಿನ ಒಳಹೊಕ್ಕು ೪-೫ ಚಾಕೊಲೇಟ್‌ನೊಂದಿಗೆ ಹೊರಬರುತ್ತದೆ. ಅವುಗಳನ್ನು ಸುಬ್ಬಣ್ಣ, ಬಾಲಕ-ಬಾಲಕಿಯರಿಗೆ ಪ್ರೀತಿಪೂರ್ವಕವಾಗಿ ಕೊಡುತ್ತಾರೆ.

ಸುಬ್ಬಣ್ಣನವರ ನಿವಾಸದ ಹತ್ತಿರ ಒಂದು ದೋಭಿಘಾಟ್ ಇತ್ತು. ಅಲ್ಲಿ ಪ್ರತಿದಿನವೂ, ಅಗಸರು ಕತ್ತೆಗಳ ಮೇಲೆ ಬಟ್ಟೆಗಳನ್ನು ಸಾಗಿಸಿಕೊಂಡು ಬಂದು, ತಾವು ಬಟ್ಟೆಗಳನ್ನು ಒಗೆಯುವಾಗ ಕತ್ತೆಗಳನ್ನು ಸ್ವತಂತ್ರವಾಗಿ ಮೇಯಲು ಬಿಟ್ಟು ಬಿಡುತ್ತಿದ್ದರು. ತಾವು ನಿರಾಳವಾಗಿ ತಮ್ಮ ಕೆಲಸವನ್ನು ಮಾಡುವ ದೃಷ್ಟಿಯಿಂದ ಮಾತ್ರ ಇವುಗಳನ್ನು ಹೊರಗೆ ಬಿಡುತ್ತಿದ್ದುದರಿಂದ ಕತ್ತೆಗಳು ತಪ್ಪಿಸಿಕೊಳ್ಳದ ಹಾಗೆ ಅವುಗಳ ಕಾಲುಗಳಿಗೆ ಹಗ್ಗದಿಂದ ಕಟ್ಟಿರುತ್ತಿದ್ದರು. ಅವುಗಳ ಓಡಾಟ ಪ್ರಯಾಸಕರವಾಗಿದ್ದು, ಮೇಯುವಾಗ ಮುಂದಕ್ಕೆ ಹೋಗಲು ಕಷ್ಟ ಪಡುತ್ತಿದ್ದವು. ಒಮ್ಮೆ ಇವರ ಮನೆಯ ಮುಂದೆಯೇ ಇಂತಹ ೪-೫ ಕತ್ತೆಗಳು ನಿಂತಿದ್ದವು. ಅವುಗಳ ದಯನೀಯ ಸ್ಥಿತಿಯನ್ನು ಸುಬ್ಬಣ್ಣನವರಿಂದ ನೋಡಲಾಗಲಿಲ್ಲ. ತಕ್ಷಣವೇ ಮನೆಯೊಳಕ್ಕೆ ಹೋಗಿ ಒಂದು ಚಾಕುವನ್ನು ತೆಗೆದುಕೊಂಡು ಬಂದು, ಮೆಲ್ಲಗೆ ಕತ್ತೆಗಳ ಕಾಲಿಗೆ ಕಟ್ಟಿದ ಹಗ್ಗವನ್ನು ಕೊಯ್ದು ಬಿಸಾಡಲು ಪ್ರಾರಂಭಿಸಿದರು. ಸುಬ್ಬಣ್ಣನವರಿಗೆ ತಾವು ಕತ್ತೆಗಳೊಡನೆ ಇರುವುದರಿಂದ ಮತ್ತು ಅವುಗಳ ಸ್ವಭಾವ ತಿಳಿದಿದ್ದುದರಿಂದ, ತಮ್ಮ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡೇ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಆದರೂ

ಒಂದು ಕತ್ತೆ, ತನ್ನ ಸ್ವಾತಂತ್ರ್ಯವನ್ನು ಪಡೆಯುತ್ತಿದ್ದಂತೆಯೇ 'ಕೃತಜ್ಞತಾಪೂರ್ವಕವಾಗಿ' ಅದರ ಹಿಂದಿನ ಕಾಲುಗಳಿಂದ ಅವರ ದೇಹವನ್ನು ಸ್ಪರ್ಶಿಸಿದ್ದರಿಂದ ಸುಬ್ಬಣ್ಣನವರು ವೈದ್ಯರ ಸೇವೆ ಪಡೆದು, ಸುಮಾರು ಒಂದು ತಿಂಗಳು ಕಾಲ ಮನೆಯಲ್ಲೇ ವಿಶ್ರಾಂತಿ ಪಡೆಯಬೇಕಾಯಿತು.

ಮತ್ತೊಮ್ಮೆ ಅವರು ತಮ್ಮ ಸ್ನೇಹಿತರೊಂದಿಗೆ ಊರ ಹೊರವಲಯದಲ್ಲಿ ಬಿಸಿಲಿನ ಬೇಗೆ ತಾಳಲಾರದೆ ಎಳನೀರು ಕುಡಿಯುತ್ತಿದ್ದರು. ಅದೇ ವೃತ್ತದಲ್ಲಿ ಒಬ್ಬ ಟ್ರಾಫಿಕ್ ಲೇಡಿ ಪೊಲೀಸ್ ಕಾನ್ಸ್‌ಟೇಬಲ್ ಕಾರ್ಯನಿರ್ವಹಿಸುತ್ತಿದ್ದುದನ್ನು ಕಂಡು ಆಕೆಯನ್ನು ಕೈನಿಂದ ಸನ್ನೆ ಮಾಡಿ ಕರೆದರು. ಪೊಲೀಸನವರನ್ನು ಕೈಸನ್ನೆಯಿಂದ ಕರೆಯುವುದು ಗಂಡಾಂತರವೆ. ಅದರಲ್ಲೂ ಸ್ತ್ರೀ ಪೋಲೀಸರನ್ನು! ಆದರೂ ಇವರ ವಯಸ್ಸಿಗೆ ಮರ್ಯಾದೆ ಕೊಟ್ಟು, ಆಕೆ ಗಾಂಭೀರ್ಯದಿಂದ ಸುಬ್ಬಣ್ಣನವರ ಹತ್ತಿರ ಬಂದಾಗ 'ಬಾರಮ್ಮಾ, ತುಂಬಾ ಬಿಸಿಲು, ಒಂದು ಎಳನೀರು ಕುಡಿ' ಎಂದು ಸತ್ಕರಿಸಿ ಕಳುಹಿಸಿಕೊಟ್ಟರಂತೆ.

ಸುಬ್ಬಣ್ಣನವರು ಹೀಗೆಯೇ ಅಗತ್ಯತೆಯಿರುವ ಕಛೇರಿಯ ಹಾಗೂ ರಂಗಭೂಮಿಯ ಸ್ನೇಹಿತರಿಗೂ ತಮ್ಮ ಧಾರಾಳತನವನ್ನು ವಿಸ್ತರಿಸುತ್ತಿದ್ದರು. ಮಲ್ಲೇಶ್ವರದಲ್ಲಿ ಹೀಗೇ ಅಗತ್ಯತೆಯಿದ್ದ ಒಬ್ಬ ರಂಗನಟ ನರಸಿಂಹಾಚಾರ್ ಅವರಿಗೆ ಆಗಾಗ್ಗೆ ತಮ್ಮ ಕೈಲಾದಷ್ಟು ೫೦-೧೦೦ ರೂ.ಗಳನ್ನು ಕೊಡುತ್ತಿದ್ದರು. ಆದರೆ ಎಡ ಕೈನಲ್ಲಿ ಕೊಟ್ಟಿದ್ದನ್ನು ಬಲಗೈಗೆ ತಿಳಿಸಬಾರದೆಂಬ ನಂಬಿಕೆಯಿಂದ ಈ ವಿಷಯವನ್ನು ಅವರು ಯಾರಿಗೂ ತಿಳಿಸಿರಲಿಲ್ಲ. ಅದೇ ಧ್ಯೇಯದಿಂದಲೇ ಮತ್ತೊಬ್ಬ ರಂಗಕರ್ಮಿ ಗೋಪಾಲಕೃಷ್ಣ ನಾಯರಿಯರು, ಅಕಸ್ಮಾತ್ ಸುಬ್ಬಣ್ಣನವರು ಹೋದಾಗಲೇ, ಅವರೂ ಸಹ ನರಸಿಂಹಾಚಾರ್ ಅವರ ಮನೆಗೆ ಹೋದಾಗ ಇಬ್ಬರೂ ಪರಸ್ಪರ ಮುಖಾಮುಖಿಯಾಗಿ ಇಬ್ಬರಿಗು ವಿಷಯ ತಿಳಿಯಿತು.

ಸುಬ್ಬಣ್ಣನವರು ಕನ್ನಡ ರಂಗಭೂಮಿಗೆ ಒಬ್ಬ ವೈಶಿಷ್ಟ್ಯಪೂರ್ಣ ವ್ಯಕ್ತಿ. ಇವರ ನಾಟಕದ ಬದ್ಧತೆ, ಅನುಭವ ಮತ್ತು ಸಂಪನ್ನತೆಯ ಗುಣಗಳು ಪ್ರಶ್ನಾತೀತ.

## ಸುಬ್ಬಣ್ಣನವರಿಂದ ನಾಟಕಪ್ರಪಂಚಕ್ಕೆ ಕೊಡುಗೆ

**ಬೆಳಕು ವಿನ್ಯಾಸ ಮಾಡಿದ ಮುಖ್ಯ ನಾಟಕಗಳು**

| ನಾಟಕಗಳು | ನಿರ್ಮಿಸಿದ ಸಂಸ್ಥೆ | ವರ್ಷ |
|---|---|---|
| ಬಿರುಗಾಳಿ | ಸಾಧನಾ | ೧೯೬೫ |
| ಯಯಾತಿ | ಕಲಾಭಿಮಾನಿಗಳು | ೧೯೬೬ |
| ಯಯಾತಿ | ಸಂಗೀತ ನಾಟಕ ಅಕಾಡೆಮಿ | ೧೯೭೦ |
| ರಂಗಭಾರತ | ಕರ್ನಾಟಕ ನಾಟ್ಯ ಪರಿಷತ್ | ೧೯೭೫ |
| ಸಮಗ್ರ ಮಂಥನ | ರಂಗ ಸಂಪದ | ೧೯೭೬ |
| ಮಹಾಪ್ರಸ್ಥಾನ | ರಂಗ ಸಂಪದ | ೧೯೭೮ |
| ಅಗ್ನಿಸಾಕ್ಷಿ | ಸ್ಫೂರ್ತಿ ಕಲಾವಿದರು | ೧೯೮೨ |

| | | |
|---|---|---|
| ಕರ್ನಾಟಕ ವೈಜಯಂತ | ವಿಶ್ವ ಕನ್ನಡ ಸಮ್ಮೇಳನ | ೧೯೮೫ |
| ಸೂರ್ಯ ಶಿಕಾರಿ | ಜನ ನಾಟ್ಯ ಮಂಡಲಿ | ೧೯೮೫ |

**ರಂಗ ವಿನ್ಯಾಸ ಮಾಡಿದ ನಾಟಕಗಳು**

| | | |
|---|---|---|
| ೧. ಡಾ.ಫ್ಲಸ್ಟಸ್ | ಕಿಟ್ಟಿ ಮತ್ತು ಸ್ನೇಹಿತರು | ೧೯೮೧ |
| ೨. ಸಂತೆಯಲ್ಲಿ ನಿಂತ ಕುಬೇರ ವಾಲ್ಟರ್ | ಡಿ'ಸೋಜ | ೧೯೮೫ |

**ವಸ್ತ್ರ ವಿನ್ಯಾಸ ಮಾಡಿದ ನಾಟಕಗಳು**

| | |
|---|---|
| ೧. ಯಯಾತಿ | ಸಿ.ಜಿ.ಕೃಷ್ಣಸ್ವಾಮಿ |
| ೨. ತಾಯಿ | ಸಮುದಾಯ |

**ನಟಿಸಿದ ನಾಟಕಗಳು**

| | |
|---|---|
| ೧. ಗದಾಯುದ್ಧ | ೧೯೫೩ |
| ೨. ಗಂಡ್ಸಲ್ವೆ ಗಂಡಸು | ೧೯೫೪ |
| ೩. ಗುಮಾಸ್ತ | ೧೯೫೫ |
| ೪. ಸಾಹುಕಾರ | ೧೯೫೫ |
| ೫. ಮೀನಾ ಮದುವೆ | ೧೯೫೮ |
| ೬. ಯಮನ ಸೋಲು | ೧೯೫೯ |
| ೭. ಸುಂದ್ರೋಪ ಸುಂದ್ರು | ೧೯೫೯ |
| ೮. ಪ್ರತ್ಯಕ್ಷ ಪ್ರಮಾಣ | ೧೯೫೯ |
| ೯. ಏಕೀಕರಣ | ೧೯೫೯ |
| ೧೦. ಡಾ.ಬ್ರಹ್ಮಚಾರಿ | ೧೯೬೦ |
| ೧೧. ಗಗ್ಗಯ್ಯನ ಗಡಿಬಿಡಿ | ೧೯೬೦ |
| ೧೨. ಹುತ್ತದಲ್ಲಿ ಹುತ್ತ | ೧೯೬೩ |
| ೧೩. ಬಿರುಗಾಳಿ | |
| ೧೪. ಹೋಂ ರೂಲ್ | ೧೯೬೮ |
| ೧೫. ಟೊಳ್ಳು ಗಟ್ಟಿ | ೧೯೬೯ |
| ೧೬. ನಾಲ್ಕು ದಿನ | ೧೯೭೧ |
| ೧೭. ಕತ್ತಲೆ ಬೆಳಕು | ೧೯೭೪ |
| ೧೮. ಮಾರೀಚನ ಬಂಧುಗಳು | ೧೯೭೬ |

೧೯. ಡಾ. ಫಸ್ಟ್‌ಸ್ ೧೯೮೧

೨೦. ದಂಗೆಯ ಮುಂಚಿನ ದಿನಗಳು ೧೯೮೪

**ನಿರ್ದೇಶಿಸಿದ ನಾಟಕಗಳು**

೧. ಯಮನ ಸೋಲು

೨. ಸುಂದ್ರೋಪ ಸುಂದ್ರು

೩. ಏಕೀಕರಣ

೪. ಡಾ.ಬ್ರಹ್ಮಚಾರಿ

೫. ಪ್ರತ್ಯಕ್ಷ ಪ್ರಮಾಣ

೬. ಗಗ್ಗಯ್ಯನ ಗಡಿಬಿಡಿ

೭. ನಂ ಕ್ಲಬ್ಬು

೮. - Anniversary (English)

೯. ಹೋಂ ರೂಲ್

೧೦. ಗಂಡಸ್ಕತ್ರಿ

೧೧. ವೈದ್ಯನ ವ್ಯಾಧಿ

೧೨. ಸಮಗ್ರ ಮಂಥನ

೧೩. ಉತ್ತಮ ಪ್ರಭುತ್ವ ಲೊಳಲೊಟ್ಟೆ

೧೪. ಕತ್ತಲೆ ಬೆಳಕು

೧೫. ಮಹಾ ಪ್ರಸ್ಥಾನ

೧೬. ಭಾರತ ಭಾಗ್ಯವಿಧಾತ

೧೭. ಗುಲಾಮನ ಸ್ವಾತಂತ್ರ್ಯ ಯಾತ್ರೆ

೧೮. ಸೃಷ್ಟಿ

೧೯. The Artist colony

೨೦. ಹರಿಜನ್ವಾರ

೨೧. ಟಿ.ಪ್ರಸನ್ನನ ಗೃಹಸ್ಥಾಶ್ರಮ

೨೨. ಎಚ್ಚಮ ನಾಯಕ

೨೩. ಅಗ್ನಿಸಾಕ್ಷಿ

೨೪. ಚಂದ್ರಗುಪ್ತ

೨೫. ಇದು ಭಾಗ್ಯ ಇದು ಭಾಗ್ಯವಯ್ಯ

೧೬. ಕಾವ್ಯರಸನ ತರಂಗ

೧೭. ಸಾಯೋ ಆಟ

೧೮. ಕೇಳು ಜನಮೇಜಯ

೧೯. ಕೊಡೆಗಳು

**೧೯೮೫ ರ ಜನವರಿಯಲ್ಲಿ ದೆಹಲಿಯಲ್ಲಿ 'ಶ್ರೀರಂಗ ನಾಟಕೋತ್ಸವ'ದಲ್ಲಿ ನಿರ್ದೇಶಿಸಿದ ನಾಟಕಗಳು**

೧. ಉತ್ತಮ ಪ್ರಭುತ್ವ ಲೊಳಲೊಟ್ಟೆ

೨. ಗುಮ್ಮನೆಲ್ಲಿಹ ತೋರಮ್ಮ

೩. ಹರಿಜನ್ವಾರ

೪. ನೀವೇ ಹೇಳಿರಿ

೫. ಶೋಕ ಚಕ್ರ

**ಪ್ರಶಸ್ತಿಗಳು ಹಾಗೂ ಸನ್ಮಾನಗಳು**

೧. ೧೯೮೯ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ 'ಗೌರವ ಪ್ರಶಸ್ತಿ'

೨. ೧೯೯೮ರಲ್ಲಿ 'ಮಾನು ಪ್ರಶಸ್ತಿ'

೩. ೨೦೦೨ರಲ್ಲಿ 'ವಂದೇ ಮಾತರಂ' ಕವನ ಸಂಕಲನಕ್ಕೆ ಗೊರೂರು ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ

೪. ೨೦೦೪ರಲ್ಲಿ ಅಮೆರಿಕ ಪ್ರವಾಸ ಕೈಕೊಂಡಾಗ ಕ್ಯಾಲಿಫೋರ್ನಿಯಾದ ಕನ್ನಡ ಕೂಟ ನಡೆಸಿದ ಶ್ರೀರಂಗರ ಜನ್ಮಶತಮಾನೋತ್ಸವದ ನಿಮಿತ್ತ ಆ ಕೂಟಕ್ಕೆ 'ಶ್ರೀರಂಗರ ಉತ್ತಮ ಪ್ರಭುತ್ವ ಲೊಳಲೊಟ್ಟೆ' ನಾಟಕಕ್ಕೆ ನಿರ್ದೇಶನಕ್ಕಾಗಿ ಸನ್ಮಾನ

೫. ೨೦೦೪ರಲ್ಲಿ ಭಾರತ ಯಾತ್ರಾ ಕೇಂದ್ರ, ಬೆಂಗಳೂರು ಇವರಿಂದ ಸನ್ಮಾನ

೬. ೨೦೦೭ರಲ್ಲಿ ಅಂತರಂಗ ಸಂಸ್ಥೆಯವರಿಂದ ಸನ್ಮಾನ

೭. ೨೦೧೦ರಲ್ಲಿ ಅಂಬಾರಿ ಸಂಸ್ಥೆಯವರಿಂದ ಸನ್ಮಾನ

೮. ೨೦೧೦ರಲ್ಲಿ ರಂಗ ಪ್ರಪಂಚ ಸಾಂಸ್ಕೃತಿಕ ವೇದಿಕೆಯವರಿಂದ ಸನ್ಮಾನ

೯. ೨೦೧೨ರಲ್ಲಿ ರಂಗ ಕಲಾಮೇಳ ಸಂಸ್ಥೆಯವರಿಂದ ಸನ್ಮಾನ

೧೦. ೨೦೧೨ರ ನಾಟಕ ಮನೆ ರಂಗ ಪುರಸ್ಕಾರ

೧೧. ೨೦೧೩ರಲ್ಲಿ 'ನಾಟ್ಯಶ್ರೀ' ಪ್ರಶಸ್ತಿ

೧೨. ೨೦೧೩ರಲ್ಲಿ ಜೈನ್ ಯೂನಿವರ್ಸಿಟಿಯವರ ಪ್ರಶಸ್ತಿ

*--o--*